"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

(159ನೇ ಅಧಿವೇಶನ)

ಶುಕ್ರವಾರ, 21ನೇ ಆಗಸ್ಟ್ 2026

## ವಿಷಯಾನುಕ್ರಮಣಿಕೆ (INDEX)

1. ಪ್ರಕಟಣೆ

"ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯ ತೀರ್ಮಾನದ ಕುರಿತು."

2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

646 – ಅಪ್ಪರ್ ಭದ್ರಾ ಯೋಜನೆ ಕುರಿತು
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಎನ್. ಚಲುವರಾಯಸ್ವಾಮಿ (ಜಲಸಂಪನ್ಮೂಲ ಸಚಿವರು)

656 – ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯನ್ನು ಉನ್ನತೀಕರಿಸುವ ಬಗ್ಗೆ
- ಶ್ರೀ ಐವನ್ ಡಿ' ಸೋಜಾ
- ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

764 – ಮೈಸೂರು-ಚಾಮರಾಜನಗರದಲ್ಲಿರುವ ಕೆರೆಗಳ ಕುರಿತು
- ಡಾ. ಡಿ. ತಿಮ್ಮಯ್ಯ
- ಡಾ: ಅಜಯ್ ಧರ್ಮಸಿಂಗ್ (ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

720 – ದಾಬಸ್‌ಪೇಟೆ ಸಮೀಪ ಕೈಗೆತ್ತಿಕೊಂಡಿರುವ ಕ್ವಿನ್ ಸಿಟಿ (KWIN) ಬಗ್ಗೆ
- ಶ್ರೀ ಶಿವಕುಮಾರ್ ಕೆ.
- ಶ್ರೀ ಎಂ.ಬಿ.ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

757 – ಆರೋಗ್ಯ ಇಲಾಖೆಯಲ್ಲಿನ ಖಾಲಿ ಹುದ್ದೆಗಳ ಮತ್ತು ಔಷಧಿಗಳ ಕೊರತೆ ಬಗ್ಗೆ
- ಡಾ: ಕೆ. ಗೋವಿಂದರಾಜ್
- ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**3. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು**

**ಅ) ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಒಳಚರಂಡಿ ಮತ್ತು ಜಲಸಿರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಕುರಿತು.**

– ಶ್ರೀ ಐವನ್ ಡಿ'ಸೋಜಾ

– ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**ಆ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹಾಸ್ಟೆಲ್ ಕಟ್ಟಡದ ಬಾಡಿಗೆ ಹಣ ಪಾವತಿಯಾಗದ ಕುರಿತು.**

– ಶ್ರೀ ಬಸನಗೌಡ ಬಾದರ್ಲಿ

– ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**ಇ) ದರ್ಬೆ ಸಮೀಪದ ಸಿ.ಟಿ.ಓ. ಬಳಿ ನಿರ್ಮಾಣಗೊಂಡ ಅಲ್ಪಸಂಖ್ಯಾತ ಸಮುದಾಯ ಭವನವು ಪಾಳು ಬೀಳುವ ಸ್ಥಿತಿಯಲ್ಲಿರುವ ಕುರಿತು.**

– ಶ್ರೀ ಮಂಜುನಾಥ ಭಂಡಾರಿ

– ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಈ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ನೀಡಬೇಕಾದ ಮೂಲಸೌಕರ್ಯಗಳನ್ನು ಪೂರೈಕೆ ಮಾಡುವ ಕುರಿತು.**

– ಶ್ರೀಮತಿ ಬಲ್ಕೀಸ್ ಬಾನು

– ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**4. ವರದಿಯನ್ನೊಪ್ಪಿಸುವುದು**

**5. ಸಭೆಯ ಮುಂದಿಡಲಾದ ಕಾಗದಪತ್ರಗಳು**

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026**

– ಶ್ರೀ ಕೃಷ್ಣಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026**

– ಶ್ರೀ ಕೃಷ್ಣಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2026**

– ಶ್ರೀ ಕೃಷ್ಣಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ)

**(ವಿಧೇಯಕ ಅಂಗೀಕೃತವಾಯಿತು)**

**7. ಗಮನ ಸೆಳೆಯುವ ಸೂಚನೆಗಳು**

**ಅ) ರಾಜ್ಯದಲ್ಲಿ ಬಿಪಿಎಲ್ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರದಿಂದ/ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಲ್ಯಾಪ್‌ಟಾಪ್ ಒದಗಿಸಿ ಸರ್ಕಾರಿ ಕಾಲೇಜುಗಳಲ್ಲಿ ಡಿಜಿಟಲ್ ಸೌಲಭ್ಯ ಕಲ್ಪಿಸುವ ಕುರಿತು."**

– ಶ್ರೀ ಶಿವಣ್ಣ ಬಿ.ಎಸ್.

– ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು) (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ)

**ಆ) ಕರ್ನಾಟಕ ರಾಜ್ಯದಲ್ಲಿ ಗೊಲ್ಲ ಸಮುದಾಯಕ್ಕೆ ಪ್ರತ್ಯೇಕ 'ಯಾದವ ಗೊಲ್ಲ ನಿಗಮ'ವನ್ನು ಸ್ಥಾಪಿಸುವ ಕುರಿತು.**

– ಶ್ರೀ ಎಂ. ನಾಗರಾಜು

– ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು) (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**8. ಪ್ರಕಟಣೆ**

**"ಕರ್ನಾಟಕ ವಿಧಾನ ಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

<<<>>>

(811) 21.08.2026/12.30/ಎಂವಿ-ಆರ್‌ಎನ್

# ಕರ್ನಾಟಕ ವಿಧಾನ ಪರಿಷತ್ತು

ಶುಕ್ರವಾರ, ದಿನಾಂಕ 21ನೇ ಆಗಸ್ಟ್ 2026

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಮಧ್ಯಾಹ್ನ 12 ಗಂಟೆ 37 ನಿಮಿಷಕ್ಕೆ ಸಮಾವೇಶಗೊಂಡಿತು

ಮಾನ್ಯ ಸಭಾಪತಿಯವರಾದ ಶ್ರೀ ಸಲೀಂ ಅಹ್ಮದ್‌ರವರು ಪೀಠದಲ್ಲಿ ಉಪಸ್ಥಿತರಾದರು.

(811) 21.08.2026/12.30/ಎಂವಿ-ಆರ್‌ಎನ್

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ರಾತ್ರಿಯೆಲ್ಲಾ ಇದೇ ರೀತಿ ಹೇಳುತ್ತಿರುತ್ತಾರೆ.

**ಶ್ರೀ ಯು.ಟಿ ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರು ದೇವರ ಜಪವನ್ನು ಮಾಡಿದ್ದರೆ, ಅವರಿಗೆ ಪುಣ್ಯವಾದರೂ ಬರುತ್ತಿತ್ತು.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

1. ಪ್ರಕಟಣೆ

**ಸಭಾಪತಿಯವರು:-** ದಿನಾಂಕ:28.01.2026ರಂದು ನಡೆದ ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ. ಈಗಾಗಲೇ ಸರ್ಕಾರದಿಂದ ಸ್ವೀಕರಿಸಿರುವ ಮತ್ತು ಸ್ವೀಕರಿಸಲಿರುವ ವಿಧೇಯಕಗಳನ್ನು ಮಂಡಿಸಿ, ಪರ್ಯಾಲೋಚನೆ ಮತ್ತು ಅಂಗೀಕಾರಕ್ಕಾಗಿ ತೆಗೆದುಕೊಳ್ಳುವುದು. ಪ್ರತಿದಿನ ಬೆಳಗ್ಗೆ 11.00 ಗಂಟೆಗೆ ಸದನವು ಸಮಾವೇಶಗೊಳ್ಳಲಿದೆ. ಈ ವರದಿಗೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

ಇವತ್ತಿನ ದಿವಸ ಬಿ.ಎ.ಸಿ. ಮೀಟಿಂಗ್‌ನಲ್ಲಿ ಸಾಕಷ್ಟು ಚರ್ಚೆಯಾಯಿತು. ಮತ್ತೆ ಸರ್ಕಾರದ Parliamentary Affairs Minister ಆದಂತಹ ಶ್ರೀ ಕೃಷ್ಣ ಬೈರೇಗೌಡರು ಮಾನ್ಯ ವಿರೋಧ ಪಕ್ಷದ ಮುಖಂಡರಿಗೆ, ನಾಯಕರಿಗೆ ಹಾಗೂ ಎಲ್ಲಾ ಸದಸ್ಯರಿಗೆ ಸದನವನ್ನು ನಡೆಸಿಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಅದಕ್ಕೆ ನಾನೂ ಕೂಡ ಮತ್ತೆ ತಮಗೆ ಮನವಿ ಮಾಡಿಕೊಳ್ಳುತ್ತೇನೆ. ನಾನು ತಮಗೆ ಕಳೆದ ಐದು ದಿನಗಳಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈಗ ದಯವಿಟ್ಟು ಕಲಾಪವನ್ನು ನಡೆಸೋಣ. ಏಕೆಂದರೆ, ಇದನ್ನು ಇಡೀ ರಾಜ್ಯದ ಜನರು ನೋಡುತ್ತಿದ್ದಾರೆ. ಹೊರಗಡೆ ಬೇರೆ ಬೇರೆ ರೀತಿಯಲ್ಲಿ ವಿಶ್ಲೇಷಣೆಗಳಾಗುತ್ತಿವೆ. ನಾನು ನಿನ್ನೆಯ ದಿವಸ ಕೂಡ ತಮಗೆ ಹೇಳಿದ್ದೇನೆ. ಅಂದರೆ, ಪ್ರಶ್ನೋತ್ತರಗಳು, ಶೂನ್ಯವೇಳೆ, ಗಮನಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳುತ್ತೇನೆ. ತದನಂತರ ಸರ್ಕಾರದಿಂದ ತಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಿಸುತ್ತೇನೆ. ಮಾನ್ಯ ಮಂತ್ರಿಗಳು

ಉತ್ತರ ನೀಡುವುದಕ್ಕೆ ತಯಾರಾಗಿ ಸದನಕ್ಕೆ ಬಂದಿದ್ದಾರೆ. ಏಕೆಂದರೆ, ದಿನಪತ್ರಿಕೆಗಳಲ್ಲಿ ಲೇಖನ ಕೂಡ ಬರುತ್ತಿದೆ. ಸದನದಲ್ಲಿ ಏನು ನಡೆಯುತ್ತಿದೆ ಮತ್ತು ಏಕೆ ಈ ರೀತಿ ಮಾಡುತ್ತಿದ್ದಾರೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಆದುದರಿಂದ, ನಾನು ದಯವಿಟ್ಟು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವು ದಯವಿಟ್ಟು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾವೆಲ್ಲರೂ ಚರ್ಚೆ ಮಾಡೋಣ. ರಾಜ್ಯದ ಹಿತದೃಷ್ಟಿಯಿಂದ ಜನರ ಸಮಸ್ಯೆಗಳ ಬಗ್ಗೆ, ಅದು ನೀರಿನ ಸಮಸ್ಯೆ ಇರಬಹುದು, ಬರಗಾಲದ ಸಮಸ್ಯೆ ಇರಬಹುದು. ಈ ರೀತಿ ಹಲವಾರು ಜ್ವಲಂತ ಸಮಸ್ಯೆಗಳು ಈ ರಾಜ್ಯದಲಿದೆ. ಆ ಹಿನ್ನೆಲೆಯಲ್ಲಿ ತಾವು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದನ್ನು ತಾವು ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತೆಗೆದುಕೊಳ್ಳಿ. ಆಗ ನೀವು ಏನೆಲ್ಲಾ ಹೇಳಬೇಕು, ಅದನ್ನೆಲ್ಲಾ ಹೇಳಿ. ನಾನು ಅದಕ್ಕೆ ಸರ್ಕಾರದ ಕಡೆಯಿಂದ ಉತ್ತರ ಕೊಡಿಸುತ್ತೇನೆ.

(ಮುಂದು)

(812) 21.08.2026 ವೈಎಲ್-ಆರ್‌ಎನ್ 12.40 (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ಆದರೆ, ರಾಜೀನಾಮೆ ಕೊಡಬೇಕೆಂಬ ಹಠವನ್ನಿಟ್ಟುಕೊಂಡು ಪ್ರತಿಭಟನೆ ಮಾಡುವುದು ಸರಿಯಾಗುವುದಿಲ್ಲ. ಈ ರಾಜ್ಯದ ಜನತೆ ತಮ್ಮನ್ನೆಲ್ಲಾ ಗಮನಿಸುತ್ತಿದ್ದಾರೆ. ಅದನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಜನರು ನಮ್ಮನ್ನು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಪರಿಹಾರ ಹುಡುಕಲಿ ಎಂದು ಆಯ್ಕೆ ಮಾಡಿ, ಇಲ್ಲಿಗೆ ಕಳುಹಿಸಿಕೊಟ್ಟಿರುವುದು. ಹಾಗಾಗಿ, ಈ ಪ್ರತಿಭಟನೆಯನ್ನು ಇಲ್ಲಿಗೆ ಕೈಬಿಡಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ Business Advisory Committee ನಡೆಸಿ, ಪ್ರತಿಭಟನೆ ಪ್ರಾರಂಭಿಸಿ, ಇವತ್ತಿಗೆ 5 ದಿನಗಳಾಗಿದ್ದು, ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡುತ್ತಿದ್ದೀರಿ. ಹಾಗೆಯೇ ತಾವು ನಮ್ಮ ಕಡೆ ಸಹ ಸ್ವಲ್ಪ ಗಮನಹರಿಸಬೇಕು. ಇಷ್ಟು ಜನರ ಹಕ್ಕುಚ್ಯುತಿಯಾಗುತ್ತಿದ್ದು, ನಾವು ಏತಕ್ಕಾಗಿ ಈ ಸದನಕ್ಕೆ ಬರುತ್ತಿದ್ದೇವೆ, ನಾವು ಕೇಳುವಂಥ ಪ್ರಶ್ನೆ ಯಾರಿಗೂ ಕೂಡ ಸರಿಯಾಗಿ ಕೇಳಿಸುತ್ತಿಲ್ಲ, ನಮ್ಮ ಹಕ್ಕುಗಳ ಬಗ್ಗೆ ಏನಾಗಬೇಕು?

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯru ಸ್ವಸ್ಥಾನಗಳಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀ ಚಲುವರಾಯಸ್ವಾಮಿ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡಿದರೆ ಹೇಗೆ ಸದನ ನಡೆಸುವುದು?

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ನಾಗೇಂದ್ರರವರಿಂದ ರಾಜೀನಾಮೆ ಕೊಡಿಸಲಿ, ಸದನ ನಡೆಸೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ Business Advisory Committee ಯಲ್ಲಿ ಏನಾಗಿದೆ ಎಂಬುದನ್ನು ಪ್ರಸ್ತಾಪ ಮಾಡಿದ್ದು, ಪುನಃ ಅದರ ಬಗ್ಗೆ ನಾನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಸಮಿತಿಯಲ್ಲಿ ಏನಾಗಿದೆ ಅದು ಅಲ್ಲಿಗೆ ಸಂಬಂಧಿಸಿರುತ್ತದೆ. ಭ್ರಷ್ಟಚಾರದ ವಿಚಾರವನ್ನೇ ಇಟ್ಟುಕೊಂಡು ಒಂದೇ ಪ್ರಶ್ನೆ ಕೇಳಿದ್ದೇವೆ. ಅದೇನೆಂದರೆ, ರೂ.187 ಕೋಟಿ ಸೋರಿಕೆಯಾಗಿದ್ದು, ಆ ಕಾಲಘಟ್ಟದಲ್ಲಿ ಏನು ಪರಿಸ್ಥಿತಿ ಇತ್ತು, ಅದರಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ಆ ಕಾಲಘಟ್ಟದಲ್ಲಿ ಸಚಿವರಾಗಿದ್ದ ಶ್ರೀ ಬಿ.ನಾಗೇಂದ್ರರವರು ರಾಜೀನಾಮೆ ನೀಡಿದರು. ಅದರ ಜಾಮೀನು ಸಿಕ್ಕಿರುವುದು ಒಂದನ್ನು ಬಿಟ್ಟರೆ, ಬೇರೆನ್ನೂ clean chit ಸಿಕ್ಕಿಲ್ಲ. ಆ ರೀತಿ ಸಚಿವ ಸಂಪುಟಕ್ಕೆ ತೆಗೆದುಕೊಂಡಿದು ತಪ್ಪು. ಈ ರೀತಿ ಹಠಮಾರಿತನ ಮಾಡಿ,...ಸರ್ಕಾರ ಅದೊಂದು ಕಾರಣಕ್ಕೆ ಹಠಕ್ಕೆ ಬಿದ್ದು ಹೋರಾಟ ಮಾಡುತ್ತಿದೆ ಅಲ್ಲವೇ?

**ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಅದು ಸರಿಯೇ, ತಪ್ಪೇ ಎಂಬುದನ್ನು ಗೌರವಾನ್ವಿತ ರಾಜ್ಯಪಾಲರು ತೀರ್ಮಾನ ಮಾಡುತ್ತಾರೆ. ಖಾತೆ ಹಂಚುವಾಗ ಪ್ರತಿಜ್ಞೆ ಮಾಡಿಸುವವರು ಯಾರು? ಹಾಗಾಗಿ, ಇದು ಗೌರವಾನ್ವಿತ ರಾಜ್ಯಪಾಲರ ವ್ಯಾಪ್ತಿಗೆ ಬರುವಂಥವರಾಗಿದ್ದು, ಕಾನೂನು, conduct ಇದೆ. ಅದರ ಬಗ್ಗೆ ವಿರೋಧ ಪಕ್ಷದವರು ಏತಕ್ಕೆ ಹೇಳಬೇಕು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನೇ ನಾವು ಪ್ರಶ್ನೆ ಮಾಡುತ್ತಿರುವುದು. ನಮ್ಮ ಪ್ರಶ್ನೆಯೇನೆಂದರೆ, ಮಾನ್ಯ ನಾಗೇಂದ್ರರವರು ರಾಜೀನಾಮೆ ನೀಡಬೇಕು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಹೇಳುತ್ತಿರುವ ವಿಚಾರದ ಕುರಿತು ತಮಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತೇನೆ. ನಾನು ಏನಾದರೂ ತಮಗೆ ಸದರಿ ವಿಚಾರದ ಕುರಿತು ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದೇನೆಯೇ? ತಾವೆಲ್ಲರೂ ಚರ್ಚೆ ಮಾಡಿ. ಸರ್ಕಾರದಿಂದ ಉತ್ತರ ಕೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ರೈತರ ಸಮಸ್ಯೆಗಳ ಬಗ್ಗೆ ಹೇಳಿದ್ದೀರಿ. ಹಾಗೆಯೇ ಕೆ.ಪಿ.ಎಸ್.ಸಿ. ಮತ್ತು ಯುವಕರ ಸಮಸ್ಯೆ ಇದೆ. ಬಿಡದಿ ಸಮಸ್ಯೆ ಇದೆ. ನೈಸ್ ಹಗರಣದ ಸಮಸ್ಯೆ ಇದೆ. ಅನೇಕರಿಗೆ ಪಿಂಚಣಿ ಸಿಗುತ್ತಿಲ್ಲ. ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಸಮಸ್ಯೆ, ಬರಗಾಲದ ಕುರಿತು, ಎಲ್ಲದರ ಚರ್ಚೆಯಾಗಬೇಕಾಗಿದ್ದು, ನಾವು ಸಹ ಅದಕ್ಕೆ ಸಿದ್ಧರಿದ್ದೇವೆ. ಆದರೆ, ಒಂದು ಪ್ರಶ್ನೆಗೆ ಸಿಂಪಲ್ ಆಗಿ,... ತಾವು ಪ್ರಕಟಣೆ ಎಂದಾಕ್ಷಣ 'ಎಲ್ಲಿಯೋ ರಾಜೀನಾಮೆ ಕೊಟ್ಟಿರಬಹುದು, ಅದನ್ನೇ ಹೇಳುತ್ತಿದ್ದಿರಿ' ಎಂದು ನಮಗೆ ಖುಷಿಯಾಗಿತ್ತು. ರಾಜೀನಾಮೆ ನೀಡಿಲ್ಲ ಎಂದ ಮೇಲೆ ನಮಗೂ ಪ್ರತಿಭಟನೆ ಮಾಡುವ ಅನಿವಾರ್ಯತೆ ಇದೆ. ಆ ಕಾರಣಕ್ಕಾಗಿ ಮಾನ್ಯ ನಾಗೇಂದ್ರರವರನ್ನು ವಜಾ ಮಾಡುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ನೋಟಿಸ್ ನೀಡಬೇಕಾಗಿತ್ತು. ಆದರೆ, ಇಲ್ಲಿಯವರೆಗೂ ನೋಟಿಸ್ ನೀಡಿಲ್ಲ. ತಾವು ನೋಟಿಸ್ ನೀಡಿದ ಮೇಲೆ ಮುಂದಿನ ವಿಚಾರ ಏನೆಂಬುದನ್ನು ಹೇಳುತ್ತಿದ್ದೆನು. ಜೊತೆಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತಿದ್ದೆನು.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಬಹುಶಃ ಮಾನ್ಯ ನಾಗೇಂದ್ರರವರಿಗೆ ಸಚಿವ ಸ್ಥಾನ ಕೊಡಬೇಕೇ, ಬೇಡವೇ ಎಂಬುದರ ಕುರಿತು ಏತಕ್ಕಾಗಿ ಅವರಿಗೆ ಸಚಿವ ಸ್ಥಾನ ಕೊಟ್ಟಿದ್ದಾರೆ ಎಂಬುದನ್ನು ಗೌರವಾನ್ವಿತ ರಾಜ್ಯಪಾಲರನ್ನು ಹೋಗಿ ಕೇಳಲಿ. ಗೌರವಾನ್ವಿತ ರಾಜ್ಯಪಾಲರಿಂದ ಪ್ರತಿಜ್ಞಾ ವಿಧಿ ಸ್ವೀಕರಿಸಿದ ನಂತರವೇ ಅಲ್ಲವೇ ಸಚಿವ ಸ್ಥಾನ ನೀಡಿದ್ದು. ಮಾನ್ಯ ನಾಗೇಂದ್ರರವರ ಮೇಲೆ ಕೇಸ್ ದಾಖಲಾಗಿದ್ದರೆ, ಗೌರವಾನ್ವಿತ ರಾಜ್ಯಪಾಲರು ಪ್ರತಿಜ್ಞಾ ವಿಧಿ ಬೋಧಿಸುತ್ತಿರಲಿಲ್ಲ.

**(ಗೊಂದಲ)**

**ಸಭಾಪತಿಯವರು:-** ಈಗ ಪ್ರಶ್ನೋತ್ತರಗಳು.

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ: 688, ಮಾನ್ಯ ಮಧು ಜಿ.ಮಾದೇಗೌಡ

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮಧು ಜಿ.ಮಾದೇಗೌಡರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ: 772, ಮಾನ್ಯ ಕೆ.ಎಸ್.ನವೀನ್.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ 731, ಮಾನ್ಯ ವೈ.ಎಂ.ಸತೀಶ್.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೈ.ಎಂ.ಸತೀಶ್‌ರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ: 735 ಮಾನ್ಯ ಡಿ.ಎಸ್.ಅರುಣ್.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಸಭಾಪತಿಯವರು:-** ಶ್ರೀಮತಿ ಬಲ್ಕೀಸ್ ಬಾನು

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸ್ವಸ್ಥಾನದಲ್ಲಿ ನಿಂತು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಪ್ರಶ್ನೆ ಸಂಖ್ಯೆ: 646**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಿದ್ದು, ಭದ್ರಾ ಮೇಲ್ದಂಡೆ ಯೋಜನೆಯನ್ನು 2007-08ನೇ ಸಾಲಿನಲ್ಲಿ ಪ್ರಾರಂಭಿಸಲಾಗಿತ್ತು. ಇದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರ ಕನಸ್ಸಾಗಿದ್ದು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಪ್ರಾರಂಭಗೊಂಡಿತು. ತುಮಕೂರು ಜಿಲ್ಲೆಯಿಂದ ಹಿಡಿದು, ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳು ಒಳಗೊಂಡ ಹಾಗೆ, ರೈತರ ಬೆನ್ನೆಲುಬಾಗಿ ಇರಬೇಕೆಂಬ ಉದ್ದೇಶದಿಂದ ಈ ಯೋಜನೆ ಪ್ರಾರಂಭವಾಗಿತ್ತು. ಈಗಾಗಲೇ ನಾವು 2026ನೇ ಇಸವಿಯಲ್ಲಿದ್ದೇವೆ. ಮಾನ್ಯ ಸಚಿವರು ಕೆಲವೊಂದು ಕಡೆ ‘ಯಾವಾಗ ಭದ್ರಾ ಮೇಲ್ದಂಡೆ ಯೋಜನೆ ಪ್ರಾರಂಭಗೊಂಡಿತ್ತು ಎಂಬುದರ ಕುರಿತು’ ಸರಿಯಾದ ಉತ್ತರವನ್ನು ನೀಡಿದ್ದಾರೆ. 2007-08ನೇ ಸಾಲಿನಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಆ ಗುತ್ತಿಗೆದಾರರು ಯಾವ ಅವಧಿಯೊಳಗೆ ಈ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು? ಎಷ್ಟು ಅಭಾವವಾಗಿದೆ ಎಂದರೆ, ಮೊನ್ನೆ ದಿವಸ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ C.A.D.A.,(Command Area Development Authority) ಬಿಲ್ಡಿಂಗ್‌ನಲ್ಲಿ ಸಭೆ ನಡೆಸಿದ್ದು, ಮಾನ್ಯ ಸಚಿವರು ಆ ಸಭೆಗೆ ಬಂದಿರುವುದಿಲ್ಲ. ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದ್ದು, ರೈತರ ಬೆಳೆಗಳಿಗೆ ಒಂದು ಹನಿ ಸಹ ನೀರನ್ನು ಕೊಡಲು ಸಾಧ್ಯವಾಗದೇ ಇರುವ ಪ್ರಯುಕ್ತ ಈ ಯೋಜನೆಯನ್ನು ಪ್ರಾರಂಭ ಮಾಡಲಾಗಿದೆ. ತುಂಗ ನದಿಯಿಂದ ಲಿಫ್ಟ್ ಮಾಡಿ, ಭದ್ರಾ ನದಿಗೆ ನೀರು ಹರಿಸಬೇಕೆಂದು ಮಾಡಿರುವಂಥದ್ದಾಗಿದೆ. ಮಾನ್ಯ ಸಚಿವರು ಫಾರೆಸ್ಟ್ ಕ್ಲಿಯರೆನ್ಸ್ ಸಿಕ್ಕಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ನನಗೆ ಬಂದಿರುವಂಥ ಮಾಹಿತಿ ಪ್ರಕಾರ ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಸುಮಾರು 20, 30 ವರ್ಷಗಳಿಂದ ಗಮನಿಸುತ್ತಿದ್ದು, ಆ ಕಾಲದಲ್ಲಿಯೇ ಫಾರೆಸ್ಟ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಸುಮ್ಮನೆ ಅಧಿಕಾರಿಗಳು ನೆಪ ಹೇಳಿ, ಸಚಿವರಿಂದ ದಾರಿ ತಪ್ಪಿಸುವಂಥ ಉತ್ತರ ಕೊಡುತ್ತಿದ್ದಾರೆ. ಇದರಿಂದಾಗಿ ಸಾರ್ವಜನಿಕರಿಗೆ, ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಹಾಗಾಗಿ, ಮಾನ್ಯ ಸಚಿವರಿಗೆ ಏತಕ್ಕಾಗಿ ಈ ರೀತಿ ಅಧಿಕಾರಿಗಳು ಸುಳ್ಳು ಮಾಹಿತಿ ಕೊಟ್ಟಿದ್ದಾರೆ ಎಂಬುದನ್ನು ತಿಳಿಸಬೇಕು.

**ಶ್ರೀ ಎನ್.ಚಲುವರಾಯಸ್ವಾಮಿ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ತುರ್ತಾಗಿರುವ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಬೆಳಕು ಚೆಲ್ಲಿದ್ದಾರೆ. ಈ ಯೋಜನೆಯಲ್ಲಿ ವಿಳಂಬವಾಗಿರುವುದು ಕೂಡ ಸತ್ಯ. ಈ

ವರ್ಷದ ನವೆಂಬರ್, ಡಿಸೆಂಬರ್ ಮಾಹೆಯೊಳಗೆ ಈ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಿ, ತುಮಕೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಿಗೆ ರೈತರಿಗೆ ಕುಡಿಯುವ ನೀರನ್ನು ಒದಗಿಸಲಾಗುವುದು.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮೇಲೆ ಸಂಪೂರ್ಣವಾದ ಭರವಸೆ ಇದೆ. ನನ್ನ ಉಪ ಪ್ರಶ್ನೆಯೇನೆಂದರೆ, ಗುತ್ತಿಗೆದಾರರಿಗೆ ಟೆಂಡರ್ ಜವಾಬ್ದಾರಿ ವಹಿಸಿದ ಮೇಲೆ ಎಷ್ಟು ವರ್ಷಗಳಲ್ಲಿ ಈ ಯೋಜನೆಯ ಕಾರ್ಯವನ್ನು ಮುಗಿಸಬೇಕಾಗಿತ್ತು? ಅದಕ್ಕೆ ಯಾವುದೇ ರೀತಿಯ ನೀತಿ ನಿಯಮಗಳಿಲ್ಲವೇ? ಎಷ್ಟು ವರ್ಷಗಳಾದರೂ liberal ಆಗಿ ತೆಗೆದುಕೊಂಡು complete ಮಾಡಲಿ ಎಂದು ಏನಾದರೂ ಆದೇಶ ಕೊಟ್ಟಿದ್ದಾರೆಯೇ? ಇಷ್ಟು ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕಾಗಿತ್ತು. ಕೇಂದ್ರ ಸರ್ಕಾರವು ಈ ಯೋಜನೆಯನ್ನು 'ರಾಷ್ಟ್ರೀಯ ಯೋಜನೆ' ಎಂದು ಘೋಷಣೆ ಮಾಡಿದ್ದು, ಈ ಯೋಜನೆಗೆ ಒಂದು ರೂಪಾಯಿ ಸಹ ನೀಡಲಿಲ್ಲ. ಪತ್ರಿಕೆಯಲ್ಲಿ ಪ್ರಕಟವಾದ ತರುವಾಯ ರೈತರಿಗೆ ಗೊತ್ತಾಗಿರುವುದು. ಕೇವಲ ನಮ್ಮ ರಾಜ್ಯ ಕಾಂಗ್ರೆಸ್ ಪಕ್ಷದ ಮಾನ್ಯ ಸಚಿವರು ಹಣವನ್ನು ನೀಡಿದ್ದರೂ ಕೂಡ ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಏತಕ್ಕೆ ಕೆಲಸವನ್ನು ಮಾಡಲಿಲ್ಲ? ಅವರನ್ನು ಬ್ಲಾಕ್ ಲಿಸ್ಟ್‌ನೊಳಗೆ ಸೇರಿಸಬೇಕು. ಅವರ ಅವಧಿಯಲ್ಲಿ ಡಿಸೆಂಬರ್ ಮಾಹೆಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸುತ್ತಾರೆ ಎಂದು ನನಗೆ ಸಂಪೂರ್ಣವಾಗಿ ಮಾನ್ಯ ಸಚಿವರ ಮೇಲೆ ಭರವಸೆ ಇದೆ. ಆದರೆ, ಇಂತಹವುಗಳನ್ನು ಸರಳೀಕರಣಗೊಳಿಸಿ, ರೈತರಿಗೆ ಬೇಕಾದಂಥ ನೀರಾವರಿ ಯೋಜನೆಯನ್ನು ಕೊಡಲಿಲ್ಲವೆಂದರೆ, ಗುತ್ತಿಗೆದಾರರು ಮನಸ್ಸಿಗೆ ಬಂದ ಹಾಗೆ ಕಾರ್ಯನಿರ್ವಹಿಸುತ್ತಿದ್ದು, ಟೆಂಡರ್ ಪ್ರಕಾರ ಕಾರ್ಯವನ್ನು ನಿರ್ವಹಿಸುತ್ತಿಲ್ಲ. ಈ ಸಂಬಂಧ ಮಾನ್ಯ ಸಚಿವರು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ಕಡೆ ಕೇಂದ್ರ ಸರ್ಕಾರವು ಹಣವನ್ನು ಬಿಡುಗಡೆ ಮಾಡಿಲ್ಲ. ಎರಡನೆಯದಾಗಿ, ಹಣದ ಲಭ್ಯತೆ ಆಧಾರದ ಮೇಲೆ ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ಸ್ವಲ್ಪ ವಿಳಂಬವಾಗಿದೆ. ಆದಷ್ಟು ಬೇಗ ಈ ಯೋಜನೆಯ ಕಾರ್ಯವನ್ನು ಪೂರ್ಣಗೊಳಿಸಿ, ನವೆಂಬರ್, ಡಿಸೆಂಬರ್ ಮಾಹೆಯೊಳಗೆ communicate ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಜಗದೇವ್ ಗುತ್ತೇದಾರ್.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಸಂಖ್ಯೆ: 637 ಅನ್ನು ಪ್ರಸ್ತಾಪಿಸಲು ಸದನದಲ್ಲಿ ಹಾಜರಿರಲಿಲ್ಲ)**

**ಸಭಾಪತಿಯವರು:-** ಪ್ರಶ್ನೋತ್ತರಗಳನ್ನು ಹೊರತುಪಡಿಸಿ, ಬೇರೆ ಯಾವುದೇ ವಿಚಾರಗಳು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಪ್ರಶ್ನೋತ್ತರ ಚರ್ಚೆಯನ್ನು ಹೊರತುಪಡಿಸಿ, ಬೇರೆ ಯಾವುದೇ ವಿಚಾರವನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಪ್ರಶ್ನೆ ಸಂಖ್ಯೆ: 656**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಸಚಿವರಾದ ಮಾನ್ಯ ಯು.ಟಿ.ಖಾದರ್‌ರವರು ನನಗಿಂತ ಜಾಸ್ತಿ Wenlock ಜಿಲ್ಲಾಸ್ಪತ್ರೆ ಬಗ್ಗೆ ಕಾಳಜಿಯನ್ನು ವಹಿಸಿದ್ದು, ಈ ಆಸ್ಪತ್ರೆಯ ಉನ್ನತೀಕರಣಕ್ಕಾಗಿ ಸಾಕಷ್ಟು ಶ್ರಮವನ್ನು ಪಟ್ಟಿದ್ದಾರೆ. ನನ್ನ ಮುಂದಿರುವ ಪ್ರಶ್ನೆಯೇನೆಂದರೆ, ಈ ಆಸ್ಪತ್ರೆಯನ್ನು ಉನ್ನತೀಕರಿಸಬೇಕು. ವಿಭಾಗ ಮಟ್ಟದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಘೋಷಣೆ ಮಾಡಬೇಕೆಂದು ಕಳೆದ ಸದನದಲ್ಲಿ ಪ್ರಶ್ನೆ ಮಾಡಿದ್ದೆನು. ಈ ಆಸ್ಪತ್ರೆಯು ಸುಮಾರು 7 ಜಿಲ್ಲೆಗಳಿಗೆ cater ಮಾಡಬೇಕಾಗಿದ್ದು, ಈ ಆಸ್ಪತ್ರೆಯನ್ನು ಉನ್ನತೀಕರಣ ಮಾಡಿ, regional ಆಸ್ಪತ್ರೆಯನ್ನಾಗಿ ಘೋಷಣೆ ಮಾಡುತ್ತೇವೆ ಎಂದು ಈ ಹಿಂದೆ ಆಹಾರ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದ ಶ್ರೀ ದಿನೇಶ್ ಗುಂಡೂರಾವ್‌ರವರು ಹೇಳಿದ್ದರು. ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ಈಗಾಗಲೇ ಸುಮಾರು ಕಡೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಬೆಳೆಯುತ್ತಿದ್ದು, ಬೆಡ್‌ಗಳ ಸಂಖ್ಯೆ ಕೂಡ ಜಾಸ್ತಿಯಾಗುತ್ತಿದೆ. ಈ ಹಿಂದೆ ಸುಮಾರು 500-600 ಬೆಡ್‌ಗಳಿದ್ದ ಆಸ್ಪತ್ರೆಯ ಸಿಬ್ಬಂದಿಗಳು ಅದೇ ಮಾಪನದಲ್ಲಿದ್ದಾರೆ.

(ಮುಂದು)

**(813) 21.08.2026/12.50/ಎಸ್‌ಕೆ-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ಒಟ್ಟಿಗೆ ಎದ್ದು ನಿಂತು ಸರ್ಕಾರದ ವಿರುದ್ಧ ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಅಲ್ಲಿ Administrative Officer ಇಲ್ಲ ಮತ್ತು ಅಲ್ಲಿ Finance Officer ಕೂಡ ಇಲ್ಲ. ಅಲ್ಲಿಗೆ ಬೇಕಾದಂತಹ ಉನ್ನತ ಅಧಿಕಾರಿಗಳು ಬರುತ್ತಿಲ್ಲ. ಒಂದು ವೇಳೆ ಈ ಆಸ್ಪತ್ರೆಯನ್ನು ಉನ್ನತೀಕರಣ ಮಾಡಿದರೆ, ಇಲ್ಲಿಗೆ Finance Officers ಬರುತ್ತಾರೆ ಮತ್ತು ಕೆ.ಎ.ಎಸ್., ಅಧಿಕಾರಿಗಳು ಬರುತ್ತಾರೆ. ಸಿಬ್ಬಂದಿಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಇದನ್ನು ಉನ್ನತೀಕರಿಸಬೇಕು ಎಂಬುದರ ಬಗ್ಗೆ ನನ್ನ ವಿನಂತಿಯಾಗಿದೆ. ಈಗ ಏಳು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ, ವೆನ್‌ಲಾಕ್ ಆಸ್ಪತ್ರೆಯನ್ನು ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಘೋಷಣೆ ಮಾಡಬೇಕೆಂಬುದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಬೇಡಿಕೆಯನ್ನು ಇಡುತ್ತೇನೆ. ಅದೇ ರೀತಿ O.P Block 70 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ. ಇದರ ಕಾಮಗಾರಿಯನ್ನು

ಕೂಡಲೇ ಪ್ರಾರಂಭ ಮಾಡಬೇಕು. ಅದೇ ರೀತಿ employees ಗಳ ಬಗ್ಗೆ ಪಟ್ಟಿಯನ್ನು ಕೊಟ್ಟಿದ್ದೀರಿ. ಸುಮಾರು 617ರಲ್ಲಿ ಕೇವಲ 228 ಹುದ್ದೆಗಳು ಮಾತ್ರ ಖಾಲಿ ಇವೆ. ಆ 617 ಹುದ್ದೆಗಳಲ್ಲಿ 228 ಹುದ್ದೆಗಳು ಖಾಲಿಯಿದ್ದರೆ ಅದನ್ನು ಯಾವಾಗ ಭರ್ತಿ ಮಾಡುತ್ತೀರಿ? ಈ ಹುದ್ದೆಗಳನ್ನು ಭರ್ತಿ ಮಾಡುವ ಅವಶ್ಯಕತೆ ಇದೆ. ಏಕೆಂದರೆ ಹೇಳಿದರೆ ಕೆ.ಎಂ.ಸಿ., ಅವರು ಈಗ MoU ಪಡೆದು ನಡೆಸಿಕೊಂಡು ಹೋಗುತ್ತಾರೆ. ಆದರೆ ಇಲಾಖೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಇಲ್ಲದ ಕಾರಣ ಅಲ್ಲಿ ದಿನನಿತ್ಯ ಕೆಲಸಕ್ಕೆ ತೊಂದರೆಯಾಗಿದೆ. ಅದು disability certificate ಮತ್ತೊಂದು ಸರ್ಟಿಫಿಕೇಟ್ ಕೊಡದಿರುವಂಥದ್ದಕ್ಕೆ ಕೂಡ ತೊಂದರೆಯಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಬಹಳ ಸಕರಾತ್ಮಕವಾಗಿ ಕೆಲಸ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿರುವಂತಹ ವೆನ್‌ಲಾಕ್‌ಸರ್ಕಾರಿ ಆಸ್ಪತ್ರೆ ಬಹುಶಃ ರಾಜ್ಯದಲ್ಲಿ ಒಂದು ಅತ್ಯುತ್ತಮವಾದ ಆಸ್ಪತ್ರೆಯಾಗಿದೆ. ಸುಮಾರು 905 ಹಾಸಿಗೆ ಇರುವಂತಹ ಆಸ್ಪತ್ರೆಯಲ್ಲಿ ಯಾವಾಗಲೂ ರೋಗಿಗಳು ಭರ್ತಿಯಾಗಿರುತ್ತದೆ. ನಾನು ಈಗಾಗಲೇ ಹೇಳಿದಂತೆ ಏಳು ಜಿಲ್ಲೆಗಳಿಂದ ಅಲ್ಲಿಗೆ ರೋಗಿಗಳು ಬರುತ್ತಿದ್ದಾರೆ. ಸರ್ಕಾರದ ಮಟ್ಟದಲ್ಲಿ ಅಧಿಕಾರಿಗಳು ಮತ್ತು ಡಾಕ್ಟರ್‌ಗಳು ಉತ್ತಮವಾಗಿ ಕೆಲಸಗಳನ್ನು ಮಾಡುತ್ತಿರುವುದರಿಂದ, ರೋಗಿಗಳು ಸಂಖ್ಯೆ ಜಾಸ್ತಿಯಾಗುತ್ತದೆ. ರೋಗಿಗಳು ಬಂದಂತಹ ಸಂದರ್ಭದಲ್ಲಿ ನಮಗೆ ಡಿಮ್ಯಾಂಡ್ ಜಾಸ್ತಿಯಾಗಿ ವ್ಯವಸ್ಥೆ ಕಡಿಮೆ ಇರುವ ವಿಚಾರ ನಮ್ಮ ಗಮನಕ್ಕೆ ಬಂದ ಕಾರಣ ಈಗಾಗಲೇ ಹೇಳಿದ್ದೇವೆ. ಶಿವಮೊಗ್ಗದಲ್ಲಿ ಎರಡು ಮೆಡಿಕಲ್ ಕಾಲೇಜುಗಳಿವೆ. ಚಿಕ್ಕಮಗಳೂರಿನಲ್ಲಿ ಮೆಡಿಕಲ್ ಕಾಲೇಜುಗಳಿವೆ. ಮಡಿಕೇರಿಯಲ್ಲಿ ಮೆಡಿಕಲ್ ಕಾಲೇಜು ಇದೆ. ದಾವಣಗೆರೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಇದೆ. ಎಲ್ಲರೂ ಇಲ್ಲಿಗೆ ಬರುತ್ತಾರೆ. ಅಲ್ಲಿಂದ ಇಲ್ಲಿಗೆ ಏತಕ್ಕೆ ಬರುತ್ತಾರೆಂದರೆ, ಆ ಮೆಡಿಕಲ್ ಕಾಲೇಜಿನಲ್ಲಿ ವೈದ್ಯರು ಸರ್ವಿಸ್ ಕೊಡುವುದಿಲ್ಲ? ಅದಕ್ಕಾಗಿ ಕಾರಣ ಕೊಟ್ಟು, ಇಲ್ಲಿ ಆದಷ್ಟು ಕಡಿಮೆ ಬರುವಂತಹ ವ್ಯವಸ್ಥೆ ಇವತ್ತು ಮಾಡಬೇಕೆಂದು ಹೇಳಿ ನಾವು ಒಂದು S.O.P. ಅನ್ನು ಎಲ್ಲಾ ಮೆಡಿಕಲ್ ಕಾಲೇಜಿಗೆ ಮುಂದಿನ ದಿವಸ ಕೊಡುತ್ತೇವೆ. ಮಾನ್ಯ ಐವನ್ ಡಿ'ಸೋಜಾರವರು ಹೇಳಿದಂತೆ, ಇಡೀ ರಾಜ್ಯದಲ್ಲಿ 115 ಬೆಡ್‌ವುಳ್ಳ ಐ.ಸಿ.ಯು., ಹೆಚ್ಚಿನದಾಗಿ ಬೆಡ್‌ಗಳು ಎಲ್ಲಿಯಾದರೂ ಇದ್ದರೆ, ಅದು ವೆನ್‌ಲಾಕ್ ಆಸ್ಪತ್ರೆಯಲ್ಲಿ ಮಾತ್ರ ಇರುವಂತಹದ್ದು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೇವಲ 70 ಮಾತ್ರ ಇದೆ. ಅಷ್ಟೊಂದು ಐ.ಸಿ.ಯು. ಇದ್ದರೂ ಕೂಡ ಇವತ್ತು ಪೂರ್ತಿಯಾಗಿದೆ. ನಮ್ಮ ಸಿಬ್ಬಂದಿ ವರ್ಗ ಏನಿದೆ, ಸುಮಾರು ಮೂವತ್ತು ನಲವತ್ತು ವರ್ಷಗಳಿಂದ ಕೆ.ಎಂ.ಸಿ.ಯವರು MoU ಇದ್ದ ಕಾರಣ ಯಾವ ವೈದ್ಯರು ಮತ್ತು ಅಧಿಕಾರಿಗಳು ನಮ್ಮ ಜೊತೆಯಲ್ಲಿದ್ದಾರೆ. ಅದಕ್ಕೆ ಹೆಚ್ಚಿನದಾಗಿ ಅವರು ಕೂಡ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಸರ್ಕಾರಿ ಮುಖಾಂತರ ಹುದ್ದೆಗಳನ್ನು ಭರ್ತಿ ಮಾಡಬೇಕೆಂಬ ಬೇಡಿಕೆ ಇದೆ. ಮಂದಿನ ನೇಮಕಾತಿಯಾಗುವಾಗ ಅದನ್ನು ಪರಿಶೀಲನೆಗೆ

ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ರೂ. 70 ಕೋಟಿಗಳಲ್ಲ. ಅದಕ್ಕೆ ರೂ.100 ಕೋಟಿಗಳ ವೆಚ್ಚದಲ್ಲಿ plan ಅನ್ನು ಮಾಡಿದ್ದೇವೆ. ಸರ್ಕಾರ ರೂ.70 ಕೋಟಿಗಳು ಕೊಡುತ್ತದೆ. ಯಾರು ಆಸ್ಪತ್ರೆಯವರು MoU ಮಾಡುತ್ತಾರೋ, ಅದಕ್ಕೆ ರೂ.30 ಕೋಟಿ ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಅದಕ್ಕೆ ಮೂರು ಹಂತಗಳಲ್ಲಿ ಹೊಸ bill... ಅದಕ್ಕೂ ಕೂಡ ಪ್ಲಾನ್ ಹಾಕಿಕೊಂಡು ಆದಷ್ಟು ಶೀಘ್ರದಲ್ಲಿ ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ. Regional ಆಸ್ಪತ್ರೆಯಲ್ಲಿ ಒಂದು ರೀತಿಯಾಗಿ ಏನೇನು ವ್ಯವಸ್ಥೆ ಮಾಡಿಕೊಟ್ಟು, ಅಗತ್ಯವಿರುವ ಬೇರೆ ಬೇರೆ ಕೇಸ್‌ಗಳನ್ನು ಕಳುಹಿಸಬೇಕು. ಅಗತ್ಯವಿಲ್ಲದಂತಹ ಕೇಸ್‌ಗಳು ಕೂಡ ಅಲ್ಲಿಗೆ ಬರುವಂತಹದ್ದು. ಮಾನ್ಯ ಐವನ್ ಡಿ' ಸೋಜಾರವರು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಪೂರಕವಾಗಿ ಬೇಡಿಕೆಗಳನ್ನು ಈಡೇರಿಸುತ್ತೇವೆ.

**ಸಭಾಪತಿಯವರು:–** ಆಯಿತು. ಶ್ರೀ ಎಸ್.ವ್ಹಿ. ಸಂಕನೂರರವರ ಪ್ರಶ್ನೆ ಸಂಖ್ಯೆ 775

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್. ವ್ಹಿ. ಸಂಕನೂರರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**Sri S.L. BHOJEGOWDA:–** Mr. Chairman, the House is not in order.

**Sri U.T. KHADER:–** The House is in order only and you are not in order. You sit down. The House is in order always. You are not in order and you are telling the House is not in order. What to do?

**Sri S.L. BHOJEGOWDA:–** Who are you?

**ಸಭಾಪತಿಯವರು:–** ಶ್ರೀ ಜವರಾಯಿಗೌಡರವರ ಪ್ರಶ್ನೆ ಸಂಖ್ಯೆ 663

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜವರಾಯಿಗೌಡರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಸಭಾಪತಿಯವರು:–** ಡಾ॥ ಡಿ. ತಿಮ್ಮಯ್ಯನವರ ಪ್ರಶ್ನೆಯ ಸಂಖ್ಯೆ 764

**(ಗೊಂದಲ)**

**ಪ್ರಶ್ನೆ ಸಂಖ್ಯೆ 764**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ) (ಡಾ|| ಡಿ. ತಿಮ್ಮಯ್ಯನವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮೈಸೂರು-ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 114 ಕೆರೆಗಳಿವೆ. ಆ ಕೆರೆಗಳಿಗೆ ಏತ ನೀರಾವರಿ ಯೋಜನೆಗಳ ಮೂಲಕ ನೀರನ್ನು ತುಂಬಿಸಲಾಗುತ್ತಿದೆ. ಮಳೆಯಾಶ್ರಿತ ಕೆರೆಗಳಿಂದ ನೀರನ್ನು ತುಂಬಿಸಲಾಗುತ್ತಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. I want to know, ನೀರನ್ನು ಕೆರೆಗೆ ತುಂಬಿಸುವುದರಿಂದ, ಎಷ್ಟು ಎಕರೆಗಳಿಗೆ ಉಪಯೋಗವಾಗುತ್ತದೆ ಎಂಬ ಬಗ್ಗೆ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಎರಡನೇ ಪ್ರಶ್ನೆ ಏನೆಂದರೆ, ಹಲವಾರು ಕೆರೆಗಳು ಮಳೆಯಾಶ್ರಿತವಾಗಿರುವುದರಿಂದ ಹಾಗೂ ಬರಗಾಲ ಇರುವುದರಿಂದ, ಆ ಕೆರೆಗಳನ್ನು ತುಂಬಿಸುವುದಕ್ಕಾಗದೇ ಕಾರಣಕ್ಕೋಸ್ಕರ ರೈತರಿಗೆ ಸಮಸ್ಯೆಯಾಗಿದೆ. ಹಾಗಾಗಿ ಕೊಳವೆ ಬಾವಿಗಳ ಮೂಲಕ ಕೆರೆಗಳಿಗೆ ನೀರು ತುಂಬಿಸುವಂತಹ ಸಂದರ್ಭದಲ್ಲಿ ಕುಡಿಯುವ ನೀರು ಸಮಸ್ಯೆ ಏನಾಗಿದೆ ಎಂದರೆ ground level water ಕೆಳಗಡೆ ಹೋದಾಗ ಕುಡಿಯುವ ನೀರಿನ ಸಮಸ್ಯೆಯಾಗುವುದಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಎಲ್ಲಾ ಉಪ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ.

**ಡಾ|| ಅಜಯ್ ಧರ್ಮಸಿಂಗ್ (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮೈಸೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ 50 ಸಣ್ಣ ನೀರಾವರಿಗೆ ಕೆರೆಗಳಿದ್ದು, ಸುಮಾರು 1,116 M.C.F.T ಶೇಖರಣಾ ಸಾಮರ್ಥ್ಯ ಹೊಂದಿರುತ್ತದೆ. ಚಾಮರಾಜನಗರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ 64 ಕೆರೆಗಳು ಇರುತ್ತದೆ. ಮೈಸೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಡಿ 21 ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಯೋಜನೆಗಳ ಮೂಲಕ ಒಟ್ಟು 228 ಕೆರೆಗಳು ಇರುತ್ತದೆ. ಅದರಲ್ಲಿ 4 ಕೆರೆಗಳು ಸಣ್ಣ ನೀರಾವರಿ ಇಲಾಖೆಗೆ ಉಳಿದು, 224 ಕೆರೆಗಳು ವಿವಿಧ ಇಲಾಖೆಯ ವ್ಯಾಪ್ತಿಗೆ ಸೇರಿದ ಕೆರೆಗಳಾಗಿರುತ್ತದೆ. ಪಿರಿಯಾಪಟ್ಟಣ ಮತ್ತು ಸುತ್ತೂರು ಎರಡು L.I.S schemes ಇವೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ 9 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಒಟ್ಟಾರೆ ಮೇಲಿನಂತೆ, ಸಣ ನೀರಾವರಿ ಇಲಾಖೆಯ 50 ಕೆರೆಗಳ ಪೈಕಿ ಕೇವಲ 13 ಕೆರೆಗಳಿಗೆ ಏತ ನೀರಾವರಿ ಯೋಜನೆಯ ಮೂಲಕ ನಡೆಯುತ್ತಿದೆ. ಇನ್ನುಳಿದ 37 ಕೆರೆಗಳು rain-fed ಇದೆ. ಆ ಒಂದು ರೀತಿಯಿಂದ ಮಾಡಿಸುತ್ತಿದ್ದೇವೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಈ ಒಂದು ಯೋಜನೆಗೆ ಖರ್ಚು ಮಾಡಿರುವಂತಹದ್ದು ಎಷ್ಟು ಮತ್ತು ಅದರ ಜೊತೆಗೆ ಕುಡಿಯುವ ನೀರಿನ ವ್ಯವಸ್ಥೆಗೆ ಏನು ಮಾಡುತ್ತೀರಿ? ಸಣ್ಣ ನೀರಾವರಿ ಇಲಾಖೆಯಿಂದ ಕುಡಿಯುವ ನೀರಿನ ವ್ಯವಸ್ಥೆಗೆ ಏನಾದರೂ ಕ್ರಮ ಕೈಗೊಂಡಿದ್ದೀರಾ? ಕೊಳವೆ ಬಾವಿಗಳು ಎಷ್ಟು ಹಾಳಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ನಾನು ತಮ್ಮ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಡಾ॥ ಅಜಯ್ ಧರ್ಮಸಿಂಗ್:-** ಮಾನ್ಯ ಸಭಾಪತಿಯವರೇ, ಮೈಸೂರು ಜಿಲ್ಲೆಯಲ್ಲಿ ಒಟ್ಟು 50 ಸಣ್ಣ ನೀರಾವರಿ ಇಲಾಖೆಯ ಕೆರೆಗಳಲ್ಲಿ ಇದ್ದು, ಎಲ್ಲಾ ಕೆರೆಗಳ ಸರ್ವೆ ಕಾರ್ಯ ಕೈಗೊಳ್ಳಲಾಗಿದ್ದು, 32 ಕೆರೆಗಳಲ್ಲಿ ಒಟ್ಟು 350 ಎಕರೆ ಪ್ರದೇಶವು ಒತ್ತುವರಿಯಾಗಿರುವುದನ್ನು ನಾವು ಗುರುತಿಸಲಾಗಿದ್ದು, ಸದರಿ ಎಲ್ಲಾ ಕೆರೆಗಳ ಒತ್ತುವರಿಯನ್ನು ತೆರವುಗೊಳಸಲಾಗಿರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಬರುವ ಒಟ್ಟು 64 ಕೆರೆಗಳ ಪೈಕಿ 60 ಕೆರೆಗಳ ಸರ್ವೆ ಕಾರ್ಯವನ್ನು ಕೈಗೊಂಡಿದ್ದು, 16 ಕೆರೆಗಳಲ್ಲಿ ಸುಮಾರು 60 ಎಕರೆಗಳಷ್ಟು ಒತ್ತುವರಿಯನ್ನು ಗುರುತಿಸಿ ತೆರವುಗೊಳಸಲಾಗಿರುತ್ತದೆ. ಬಾಕಿ 4 ಕೆರೆಗಳಲ್ಲಿ ಕಂದಾಯ ಇಲಾಖೆಯವರಿಂದ ಆರ್.ಟಿ.ಸಿ. ಇಂಡೀಕರಣ ಹಾಗೂ ಸರ್ವೆ ಕಾರ್ಯ ಪೂರ್ಣಗೊಂಡ ನಂತರ ಒತ್ತುವರಿ ಕಂಡು ಬಂದಿದೆ.

**ಸಭಾಪತಿಯವರು:-** ಶ್ರೀ ಮಂಜೇಗೌಡರರವರ ಪ್ರಶ್ನೆ ಸಂಖ್ಯೆ 717, ಡಾ॥ ಧನಂಜಯ ಸರ್ಜಿಯವರ ಪ್ರಶ್ನೆ ಸಂಖ್ಯೆ 794 ಮತ್ತು ಶ್ರೀಮತಿ ಹೇಮಲತಾ ನಾಯಕರವರ ಪ್ರಶ್ನೆ ಸಂಖ್ಯೆ 768

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಮಂಜೇಗೌಡರವರು ಮತ್ತು ಡಾ॥ ಧನಂಜಯ ಸರ್ಜಿಯವರು ಧರಣಿಯಲ್ಲಿ ನಿರತರಾಗಿದ್ದರು; ಶ್ರೀಮತಿ ಹೇಮಲತಾ ನಾಯಕರವರು ಸದನದಲ್ಲಿ ಹಾಜರಿರಲಿಲ್ಲ)**

**ಪ್ರಶ್ನೆ ಸಂಖ್ಯೆ 720**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಕ್ವಿನ್ ಸಿಟಿಯಲ್ಲಿ ಸುಮಾರು ರೂ.40,000 ಕೋಟಿಗಳಷ್ಟು investment ಬರಬಹುದೆಂದು ನಿರೀಕ್ಷಿಸಲಾಗಿದೆ ಎಂದು ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಇಲ್ಲಿ ಮಾಡಿಕೊಂಡಿರುವ MoU ಗಳು Foreign Universities ಎಷ್ಟು ಬರುತ್ತದೆ? ಇವರಿಗೆ ಇಷ್ಟೊಂದು ಜಾಗವನ್ನು investment ಮಾಡಿ, ಇಂತಹ ಒಂದು knowledge centre ಅನ್ನಾಗಿ ಬೆಂಗಳೂರಿನಲ್ಲಿ ಮಾಡುತ್ತಿದ್ದಾರೆ ಎಂದರೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ. ಎಷ್ಟು ಜನ Foreign Universities ನವರನ್ನು contact ಮಾಡಿದ್ದೀರಿ. ಅದರಿಂದ ಬರುವಂತಹ knowledge capital ಆಗುವುದಕ್ಕೆ investment ಎಷ್ಟು ಬರುತ್ತದೆ? ಇಲ್ಲಿ local ಆಗಿ ಯಾರು approach ಮಾಡಿದ್ದಾರೆ? ಏಕೆಂದರೆ Toyota ಅವರು ಬೇರೆ ಕಡೆ ಹೋಗಬೇಕೆಂದಿದ್ದನ್ನು ಕರ್ನಾಟಕದವರು ಇವರನ್ನು ಒಪ್ಪಿಸಿ ಕರೆದುಕೊಂಡು ಬಂದಿದ್ದನ್ನು ನಾನು ನೋಡಿದ್ದೇನೆ. ಆದರೆ Foreign Universities ಎಷ್ಟು ಬರುತ್ತಿದೆ? ಇದರ ಪ್ರಗತಿ ಏನಾಗುತ್ತಿದೆ? ಇದು ಯಾವ ಹಂತದಲ್ಲಿ ಕೆಲಸ ನಡೆದಿದೆ? ಮೊದಲನೇ ಮತ್ತು ಎರಡನೇ ಹಂತ ಮುಗಿಯುವುದರೊಳಗೆ ಎಷ್ಟು ವರ್ಷಗಳವರೆಗೆ ಸಮಯ ತೆಗೆದುಕೊಳ್ಳಬಹುದು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಎಂ.ಬಿ. ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತೆ, ಕ್ವಿನ್ ಸಿಟಿಯನ್ನು ಅಭಿವೃದ್ಧಿಪಡಿಸುವ ಸಂಬಂಧ ಸುಮಾರು 4,873 ಎಕರೆ ಪ್ರದೇಶಕ್ಕೆ 28(1) ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಅದರಲ್ಲಿ ಸುಮಾರು 3,490 ಎಕರೆ ಪ್ರದೇಶಕ್ಕೆ 28(4) ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ.

(ಮುಂದು)

(814) 21.08.2026 1.00 TCH-VK (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಒಟ್ಟಿಗೆ ಸ್ವಸ್ಥಾನಗಳಲ್ಲಿ ಎದ್ದು ನಿಂತು ಸರ್ಕಾರದ ವಿರುದ್ಧ ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎಂ.ಬಿ.ಪಾಟೀಲ್ (ಮುಂದು):-**

ಮಾನ್ಯ ಸಭಾಪತಿಯವರೇ, ಕ್ವಿನ್ ಸಿಟಿ Knowledge, Well-being and Innovation Cityಯನ್ನು ಪ್ರಪ್ರಥಮವಾಗಿ ಇಡೀ ಭಾರತ ದೇಶದಲ್ಲಿಯೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದೇವೆ.

ಸುಮಾರು 5,000 ಎಕರೆಯಲ್ಲಿ ಈ ಒಂದು ಯೋಜನೆಯನ್ನು ನಾವು ಹಮ್ಮಿಕೊಂಡಿದ್ದೇವೆ. ಈಗಾಗಲೇ ನಾವು ಅಲ್ಲಿ 5 ಟೆಂಡರ್ packages ಮಾಡಿ ಸುಮಾರು 3,490 ಎಕರೆಗೆ ಟೆಂಡರ್ ಕರೆದು ಆ ಕೆಲಸವನ್ನು ಮಾಡುತ್ತಿದ್ದೇವೆ. ಈಗಾಗಲೇ first investment Toyota ನಲ್ಲಿ ಜಾಗತಿಕ ಮಟ್ಟದ ಒಂದು innovation, research centre and testing capability centre, World ನಲ್ಲಿ ಮೊದಲು, even ಜಪಾನ್‌ನಲ್ಲೂ ಕೂಡ ಇರಲಿಲ್ಲ. ಅಂತಹ ಒಂದು ಕ್ವಿನ್ ಸಿಟಿ ಮಾಡಿದ್ದಾರೆ. ಇವತ್ತಿನ ದಿವಸ ಬಹಳಷ್ಟು ಯೂನಿವರ್ಸಿಟಿಗಳು MoU ಮಾಡಿಕೊಂಡಿದ್ದಾರೆ. ಇವತ್ತಿನ ದಿವಸ ನಾವು ಬಹಳ careful ಆಗಿ allocations ಏನಿವೆ, choosing the particular University. ಬರೀ ಯೂನಿವರ್ಸಿಟಿಗಳು ಅಷ್ಟೇ ಅಲ್ಲ. ನಾಳೆ ದಿವಸ ಅಲ್ಲಿ medical hospitals ಬರಬಹುದು, innovation centres ಬರಬಹುದು, research centres ಬರಬಹುದು. ಇನ್ನು ಬಹಳಷ್ಟು Indian Institute of Science, National College ಇವುಗಳನ್ನೂ ಒಳಗೊಂಡು ಇವತ್ತಿನ ದಿವಸ ಅನೇಕ R.V and B.M.S College ಇವೆಲ್ಲವನ್ನೂ ಕೂಡ ಮಾಡಿದ್ದಾರೆ. ಮಾನ್ಯ ಸದಸ್ಯರು ಕೇಳಿದಹಾಗೆ Foreign Universities, 5 ಯೂನಿವರ್ಸಿಟಿಯವರದ್ದು ನಾನು ವಿಶೇಷ ಆಸಕ್ತಿ ವಹಿಸಿಕೊಂಡು University of Liverpool ಇರಬಹುದು, University of South Wales, Australia ಇರಬಹುದು ಜಾಗತಿಕ ಮಟ್ಟದ ಯೂನಿವರ್ಸಿಟಿಗಳೆಲ್ಲಾ ಈಗಾಗಲೇ ಬೆಂಗಳೂರಿನಲ್ಲಿ ಬಂದಿವೆ. ಅವರೆಲ್ಲರೂ ಕೂಡ University of Liverpoolನವರು ವೈಟ್‌ಪೀಲ್ಡ್‌ನಲ್ಲಿ ಈಗಾಗಲೇ ಒಂದು ಜಾಗದಲ್ಲಿ ಬಾಡಿಗೆ ಮತ್ತು ಲೀಜ್‌ಗೆ ತೆಗೆದುಕೊಂಡು ಮಾಡುತ್ತಿದ್ದಾರೆ. ಇನ್ನೊಂದು University of South Wales, Australia ರವರು Manyata Tech Park ನಲ್ಲಿ ಲೀಸ್‌ಗೆ ತೆಗೆದುಕೊಂಡಿದ್ದಾರೆ. ನಾವು ವಿಚಾರ ಮಾತನಾಡಿದಾಗ 90 percent of the Foreign Universities, ಬಹುತೇಕ Foreign Universitiesನವರು ಏನು ಮಾಡುತ್ತಾರೆಂದರೆ they will not try to invest money in the infrastructure, Buildings ನಲ್ಲಿ they prefer a lease mode. ಹೀಗಾಗಿ ನಾವು ಆ ಕ್ವಿನ್ ಸಿಟಿಯಲ್ಲಿ build-to-suit, we are going to talk to various builders and taking them as well. ಮಾನ್ಯತಾ ಟೆಕ್ ಪಾರ್ಕ್‌ನವರು ಇರಬಹುದು, ವೈಟ್‌ಫೀಲ್ಡ್‌ನಲ್ಲಿ ಅದಕ್ಕೆ ಬೇಕಾಗಿರುವಂತಹ build-to-suit buildings ಕೊಟ್ಟು, ನಾವು ಅವರಿಗೆ 30+30=60 years lease ಗೆ ಅವಕಾಶ ಮಾಡಿಕೊಟ್ಟು, ಆ Foreign Universities ಗೆ ಈಗಾಗಲೇ ಆ ಕೆಲಸವನ್ನು ಮಾಡುತ್ತಿದ್ದೇವೆ. ನಾವು ಇನ್ನು ಒಂದು ವರ್ಷದಲ್ಲಿ ಏನೇನು ಇವೆಯೋ ಅವುಗಳನ್ನೆಲ್ಲಾ on merit basis ನಲ್ಲಿ MoU ಮಾಡಿಕೊಂಡಿರುತ್ತೇವೆ, ಅವುಗಳ ಹೆಸರು ಹೇಳಿದ್ದೇನಲ್ಲಾ ಅವರ ಎಲ್ಲರ ಜೊತೆಗೆ ನಾವು finalise ಮಾಡುವುದಿಲ್ಲ. We have an expert panel to select the particular Universities. ಅವರ ಉದ್ದೇಶದ ಪ್ರಕಾರ ಅವರು ಅಲ್ಲಿ ಏನು ಮಾಡುವುದಕ್ಕಾಗುತ್ತದೆ, just lands allocate ಮಾಡಿ ಸುಮ್ಮನೆ ಕುಳಿತುಕೊಂಡರೆ ಏನೂ ಕೆಲಸ ಆಗುವುದಿಲ್ಲ. Who are genuine, ನಮ್ಮಲ್ಲಿ ಇರುವಂಥದ್ದು ಇರಬಹುದು, ವಿದೇಶದಲ್ಲಿ ಇರಬಹುದು.

ಅವರನ್ನು merit ಆಧಾರದ ಮೇಲೆ ಅವರಿಗೆ time-bound ನಲ್ಲಿ ಯಾರು ಮಾಡುತ್ತಾರೋ ಅಂತಹ ಎಲ್ಲಾ ಯೂನಿವರ್ಸಿಟಿಗಳಿಗೆ ನಾವು ಸ್ಥಾನ ಕೊಡುತ್ತೇವೆ.

**ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶಿತರು):-** ಮಾನ್ಯ ಸಚಿವರು ಮೆರಿಟ್ ಆಧಾರದ ಮೇಲೆ ಮಾಡುತ್ತಿದ್ದಾರೆ. ಅವುಗಳು ಬೆಂಗಳೂರಿನಲ್ಲಿ ಬಂದಿರುವುದು ಓಕೆ. ಆದರೆ ಬೆಂಗಳೂರು ಬಹಳ crowded ಆಗಿರುವುದರಿಂದ, ಇದೇ ರೀತಿಯ ಕ್ವಿನ್ ಸಿಟಿಗಳನ್ನು ಮೈಸೂರಿನಲ್ಲೂ ಮಾಡಬಹುದಿತ್ತು. ಏಕೆಂದರೆ ಅಲ್ಲಿ ಏರ್‌ಪೋರ್ಟ್ ಇದೆ, transport facilities ಚೆನ್ನಾಗಿದೆ. ಒಳ್ಳೆಯ atmosphere ಇದೆ ಮತ್ತು ನೀರು ಎಲ್ಲಾ ಇದೆ. ಈ ರೀತಿಯದ್ದು ಮುಂದಕ್ಕೆ ಯಾವುದಾದರೊಂದು proposal ಅನ್ನು ತೆಗೆದುಕೊಂಡು ಬರಬೇಕಾಗಿತ್ತು. ಮಾನ್ಯ ಎಸ್.ಎಂ.ಕೃಷ್ಣಾ ಸಹೇಬರು ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದಾಗ ಐ.ಟಿ ಪಾರ್ಕ್‌ಗಳು ಬಂದಿರುವುದು ಬಿಟ್ಟರೆ, nothing major changes ಏನೂ ಮೈಸೂರಿನಲ್ಲಿ ಆಗಿಲ್ಲ. ಹಾಗಾಗಿ, ಮಾನ್ಯ ಸಚಿವರಲ್ಲಿ ನನ್ನದೊಂದು request ಏನೆಂದರೆ, please consider it. ಈಗ ಏನಾಗಿದೆಯೆಂದರೆ ನಂಜನಗೂಡಿನಲ್ಲಿ ಮಾನ್ಯ ಸಚಿವರು ಒಂದು Macron ಎಂಬ M.N.C ಕಂಪನಿಯನ್ನು ತೆಗೆದುಕೊಂಡು ಬಂದು, ಅವರಿಗೆ ಲ್ಯಾಂಡ್ ಕೊಟ್ಟು ಎಲ್ಲಾ ಮಾಡುತ್ತೇವೆಂದು ಹೇಳಿದ್ದರು. ಆದರೆ, it is very unfortunate that the Government of India intervene ಆಗಿದ್ದರಿಂದ; ಇವತ್ತಿನ ದಿವಸ ಕರ್ನಾಟಕಕ್ಕೆ ಸಾವಿರಾರು ಕೋಟಿ ರೂಪಾಯಿಗಳು loss ಆಗಿವೆ. They have shifted their base to Gujarat, it is very unfortunate and this should not have happened. ಇವತ್ತಿನ ದಿವಸ ಉತ್ತರ ಪ್ರದೇಶ ಇರಬಹುದು, ತಮಿಳುನಾಡು ಇರಬಹುದು ಇಂತಹ ಕಡೆಗಳಲ್ಲಿ defence park ಮಾಡುತ್ತಿದ್ದಾರೆ. ಕರ್ನಾಟಕ ಸರ್ಕಾರ design ಮಾಡುತ್ತಿದೆ. ಎಲ್ಲಾ ನಾವೇ ಮಾಡುತ್ತೇವೆ. ಆದರೆ semi conductors production ಗುಜರಾತ್‌ನಲ್ಲಿ ಆಗುತ್ತಿದೆ. ಇದು ಯಾವ ನ್ಯಾಯ? ಈಗ ಈ ರೀತಿ Government of India ದವರು ಕರ್ನಾಟಕದ ವಿರುದ್ಧ ಮಾಡುತ್ತಿದ್ದಾರೆ. ಹಾಗಾಗಿ ಇವತ್ತಿನ ದಿವಸ ಆಂಧ್ರಪ್ರದೇಶದವರು ರೂ.1ಗಳ ಲೆಕ್ಕದಲ್ಲಿ, one acre land, free power ಕೊಟ್ಟು offer ಮಾಡುತ್ತಿದ್ದಾರೆ. ಅದೇ ರೀತಿ ತಮಿಳುನಾಡಿನವರು ಕೂಡ offer ಮಾಡುತ್ತಿದ್ದಾರೆ. To counter this, what is that you are going to do? Why these vitriol of the Union Government to Karnataka, which is repeatedly happening? I seek the reply from the Hon'ble Minister. Macron Company ಬೇರೆ ಕಡೆಗೆ ಹೋಗಿದ್ದಕ್ಕೆ ಕರ್ನಾಟಕ್ಕೆ ಎಷ್ಟು ಸಾವಿರ ಕೋಟಿ loss ಆಯಿತು ಎಂಬುದನ್ನು ಹೇಳಬೇಕು? ಇದು Prime Minister Shri Narendra Modiಯವರ ತಾರತಮ್ಯದ ನೀತಿ, Government of Indiaದ ತಾರತಮ್ಯದಿಂದಾಗಿ Karnataka has lost thousands of crores.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಹಾಗೆ ಕ್ವಿನ್ ಸಿಟಿಯಲ್ಲಿ ಬರೀ Universities, Hospitals, Innovation

Centres, ಅದೇ ರೀತಿ ಹೌಸಿಂಗ್‌ಗೂ ಕೂಡ ಕೊಡುತ್ತೇವೆ. Common Infrastructure ಕೂಡ ಕೊಡುತ್ತೇವೆ. ಇವತ್ತಿನ ದಿವಸ ಇವೆಲ್ಲವನ್ನೂ ಕೂಡ ಅಲ್ಲಿ ಮಾಡುತ್ತೇವೆ. It will be a self sustaining university. Except ನಾವೀಗ monorail ಅನ್ನು ಬಿಟ್ಟರೆ, ಉಳಿದೆಲ್ಲಾ infrastructure ಗೂ ಕೂಡ ನಾವು within one yearನಲ್ಲಿ ಮಾಡುತ್ತೇವೆ. ಆಮೇಲೆ ಮಾನ್ಯ ಸದಸ್ಯರು ಮೈಸೂರಿನಲ್ಲಿ ಈ ರೀತಿ ಏನಾದರೂ ಮಾಡಬೇಕೆಂದು ಹೇಳಿದ್ದಾರೆ. ಖಂಡಿತವಾಗಿಯು ಕೂಡ ಮೈಸೂರಿನಲ್ಲಿ ಏರ್‌ಪೋರ್ಟ್ ಪಕ್ಕದಲ್ಲಿ aerospace ಗೆ ಈಗಾಗಲೇ ನಾವು ಅದನ್ನು acquisition ಮಾಡಿ ಕೊಡುತ್ತಿದ್ದೇವೆ. ಮೈಸೂರಿನಲ್ಲಿ ಒಂದೇ ಒಂದು ಸಮಸ್ಯೆ ಏನು ಬರುತ್ತಿದೆ ಎಂದರೆ, land acquisition cost ಬಹಳ ಆಗುತ್ತಿದೆ. Farmers ನಮಗೆ ಬೆಂಗಳೂರು rateನಲ್ಲಿ ಪರಿಹಾರ ಕೊಡಬೇಕೆಂದು ಕೇಳುತ್ತಿದ್ದಾರೆ. ಅಲ್ಲಿ ಏನು ಬರುತ್ತದೋ ಅವರಿಗೆ workout ಆಗುವುದಿಲ್ಲ. ಆಮೇಲೆ ಎರಡನೆಯದಾಗಿ semiconductor ಬಗ್ಗೆ ಹೇಳಿದರು. ನಾಲ್ಕೈದು semiconductor ಕಂಪನಿಗಳು ಬೆಂಗಳೂರಿಗೆ ಬಂದು they have showed their interest. ಆದರೆ ಅವರಿಗೆ ಆ P.L.I. scheme ಇರುತ್ತದೆ. ಶೇ.೫೦ರಷ್ಟು Central Government ನವರು ಕೊಡುತ್ತಾರೆ. ಅವರು ಅಲ್ಲಿಗೆ ಬಂದು interest ತೋರಿಸಿದರೂ ಕೂಡ once they go to Central Government, they are diverted to various other states. It is happening on the political basis. ಮಾನ್ಯ ಸಭಾಪತಿಯವರೇ, ಆ ರೀತಿ ಅದು ಆಗಬಾರದು. ಅದು ಆದಾಗ್ಯೂ ಕೂಡ ಇವತ್ತಿನ ದಿವಸ ನಾವು applied materials ಇರಬಹುದು, lab research ಇರಬಹುದು, ಇನ್ನೂ ಅನೇಕ prestigious semiconductor companies ಅನ್ನು ಕರ್ನಾಟಕದಲ್ಲಿ ತರುವಂತೆ ಮಾಡಿದ್ದೇವೆ. ಇವತ್ತಿನ ದಿವಸ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಏನು ತೋರುತ್ತಿದೆ ಅದು ಆಗಬಾರದು. India as a whole, ಎಲ್ಲಿ ಮೆರಿಟ್ ಇದೆ, ಎಲ್ಲಿ eco system ಇದೆ, ಎಲ್ಲಿ talent ಇದೆಯೋ ಅಲ್ಲಿ ಇದಕ್ಕೆ support ಮಾಡಿದರೆ ಒಳ್ಳೆಯದಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಶಿವಕುಮಾರ್.ಕೆ ರವರು ಹೇಳಿದ್ದು ಸರಿಯಿದೆ. ಅದನ್ನು ನಾವು ಕೇಂದ್ರ ಸರ್ಕಾರದ ಗಮನಕ್ಕೂ ಕೂಡ ತಂದಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಶಿವಕುಮಾರ್.ಕೆರವರು ಹೇಳಿದಹಾಗೆ ಮೈಸೂರಿನಲ್ಲೂ ಕೂಡ ಒಂದು ಕ್ವಿನ್ ಸಿಟಿಯನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಏಕೆಂದರೆ ಅಲ್ಲಿ ಒಳ್ಳೆಯ ವಾತಾವರಣ ಕೂಡ ಇದೆ. ಆದರೆ ಅಲ್ಲಿ land ನ ಸಮಸ್ಯೆ ಇದೆ. ಮಾನ್ಯ ಸದಸ್ಯರ ಜೊತೆ ಮಾತನಾಡಿಕೊಂಡು ಮುಂದಿನ ಕ್ರಮ ಕೈಗೊಳ್ಳುತ್ತೇವೆ.

**Mr. CHAIRMAN:-** Ok.

**ಶ್ರೀ ಶಿವಕುಮಾರ್. ಕೆ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು supplementary ಪ್ರಶ್ನೆ ಇದೆ. ಏಕೆಂದರೆ next G.I.M. ಮಾಡುತ್ತಿದ್ದಾರೆ. ಸರ್ಕಾರ ಕಳೆದ 2 ವರ್ಷಗಳ ಹಿಂದೆ ನಡೆದಂತಹ G.I.M. ನಲ್ಲಿ ಎಷ್ಟು ಲಕ್ಷ ಕೋಟಿಗೆ MoU ಮಾಡಿಕೊಂಡಿದ್ದರು. ಎಷ್ಟು realise ಆಗಿದೆ ಎಂದು ಹೇಳಬೇಕು. ಏಕೆಂದರೆ...

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಈ ಪ್ರಶ್ನೆಗಳಲ್ಲಿ ಇಲ್ಲ. ಆದಾಗ್ಯೂ ಕೂಡ ಹೇಳಿಬಿಡುತ್ತೇನೆ. ನಮ್ಮ G.I.M.ನಲ್ಲಿ ರೂ.10,27,000 ಕೋಟಿಗಳು commitment ಆಗಿತ್ತು. ಅದರಲ್ಲಿ ಈಗಾಗಲೇ ರೂ.5 ಲಕ್ಷಗಳನ್ನು realise ಮಾಡಿದ್ದೇವೆ. ಇವತ್ತಿನ ದಿವಸ ಅದೆಲ್ಲಾ ಶೇ.65ರಷ್ಟು manufacturing ನಲ್ಲಿದೆ and 45 percent is beyond Bengaluru.

**ಪ್ರಶ್ನೆ ಸಂಖ್ಯೆ.757**
**(ಉತ್ತರ ಲಗತ್ತಿಸಿದೆ)**

**ಡಾ: ಕೆ. ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಹೆಸರಿಗಷ್ಟೇ ಆಸ್ಪತ್ರೆಗಳಿವೆ. ಆಸ್ಪತ್ರೆಯಲ್ಲಿ ರಾತ್ರಿ ವೇಳೆಯಲ್ಲಿ ರೋಗಿಗಳನ್ನು ಕೇಳುವವರೇ ಇಲ್ಲ. ಅಲ್ಲಿ, ಡಾಕ್ಟರ್‌ಗಳಿಲ್ಲ, ಔಷಧಿಗಳ ಕೊರತೆ ಇದೆ, ಆಸ್ಪತ್ರೆಗಳಲ್ಲಿ ಸ್ವಚ್ಛತೆ ಇಲ್ಲ ಮತ್ತು ಪ್ರಯೋಗಾಲಯಗಳಲ್ಲಿ ಸಿಬ್ಬಂದಿಗಳಿಲ್ಲ. ಈ ರೀತಿಯಾಗಿರುವುದರಿಂದ ಬಹಳಷ್ಟು ಜನ ಬಡವರು ತೊಂದರೆಗೀಡಾಗುತ್ತಿದ್ದಾರೆಂದು ನಾನು ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಯಾವಾಗ ಸರಿಪಡಿಸುತ್ತಾರೆಂದು ಹೇಳಬೇಕು. ಮತ್ತೆ ಆಸ್ಪತ್ರೆಗಳಲ್ಲಿ duplicate ಔಷಧಿಗಳನ್ನು ಕೊಡುತ್ತಿರುವುದು ಈಗಾಗಲೇ ಪತ್ರಿಕೆಗಳಲ್ಲಿ ಬಂದಿರುವುದು ಮಾನ್ಯ ಸಚಿವರಿಗೂ ಕೂಡ ಗೊತ್ತಿದೆ. ಈಗಾಗಲೇ ಯಾವುದೋ ಒಂದು ಕೇಸ್ ದಾಖಲಿಸಿದ್ದಾರೆ. ಆದರೂ ಕೂಡ ನಾನು ಮೊದಲೇ ಈ ಪ್ರಶ್ನೆಯನ್ನು ಹಾಕಿದ್ದೇನೆ. ಸಾಕಷ್ಟು duplicate medicines ತಯಾರು ಮಾಡಿ, Government Hospitals ಗೆ supply ಮಾಡಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಡಾ: ಕೆ. ಗೋವಿಂದರಾಜ್‌ರವರು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಹೌದು, ಇವತ್ತಿನ ದಿವಸ ನಮ್ಮಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇದೆ. ಆದರೆ ನಾನು ಒಂದು ಮಾತು ಹೇಳುವುದೇನೆಂದರೆ, ಖಾಸಗಿ ಆಸ್ಪತ್ರೆಗಳು ಬರೀ ನಗರ ಪ್ರದೇಶಗಳಲ್ಲಿ ಮಾತ್ರ ಇವೆ. ಎಲ್ಲಿ ನಗರ ಇದೆಯೋ ಅದು ಬಿಟ್ಟು 1 ಕಿ.ಮೀ ದೂರ ಹೋದರೆ ನಿಮಗೆ ಎಲ್ಲೂ ಕೂಡ ಒಂದು ಖಾಸಗಿ ಆಸ್ಪತ್ರೆ ಸಿಗುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶದಲ್ಲಿ ಶೇ.85ರಷ್ಟು ಜನರ ಆರೋಗ್ಯ ಏನಾದರು ಸರಿಯಾಗಿದ್ದರೆ, ಅದು ಸರ್ಕಾರಿ ಆಸ್ಪತ್ರೆ, ಸರ್ಕಾರಿ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಂದ ಎಂದು ನಾನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಬಯಸುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲೂ ಕೂಡ ಖಾಸಗಿ ಆಸ್ಪತ್ರೆಗಳು ಇರುವುದಿಲ್ಲ. ಎಲ್ಲಾ ಕಡೆ ಸರ್ಕಾರಿ ಆಸ್ಪತ್ರೆಗಳಿವೆ. ಇವತ್ತಿನ ದಿವಸ ಅವುಗಳನ್ನು ಇನ್ನಷ್ಟು ಉತ್ತಮವಾಗಿ ಮಾಡಬೇಕೆಂದು ಬೇಡಿಕೆ ಬಂದಿದೆ.

(ಮುಂದು)

(815)21.8.2026/1.10/ಎಂ.ಎಂ-ಬಿ.ಎನ್.ಎಸ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನದಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುವುದರಲ್ಲಿ ನಿರತರಾಗಿದ್ದರು)**

**ಶ್ರೀ ಯು.ಟಿ. ಖಾದರ್ (ಮುಂದು):-**

ಸುಮಾರು 35,000 ಹುದ್ದೆಗಳು ಕಡಿಮೆ ಎಂದು ಹೇಳಿದರೆ ಡ್ರೈವರ್, ಅಟೆಂಡರ್‌ಗಳನ್ನೆಲ್ಲಾ ಸೇರಿಸಿಕೊಂಡು; ನಮಗೆ ಕೇವಲ 2000ದಷ್ಟು ಮಾತ್ರ ವೈದ್ಯರ ಕೊರತೆ ಇದೆ. ನೇಮಕಾತಿ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ನರ್ಸ್‌ಗಳು ಮತ್ತು ಎ.ಎನ್.ಎಂ. ಗಳನ್ನು ನೇಮಕಾತಿ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಕೆ.ಇ.ಎ. ಮುಖಾಂತರ ಶೀಘ್ರದಲ್ಲಿಯೇ ಆ ನೇಮಕಾತಿಯನ್ನು ಮಾಡುತ್ತೇವೆ. ಇವತ್ತು ಸುಮಾರು 200 ವೈದ್ಯರು ಗುತ್ತಿಗೆ ಆಧಾರದ ಮೇಲೆ ಬಂದಿದ್ದಾರೆ. ಅವುಗಳಿಗೆ ಹಂತ-ಹಂತವಾಗಿ ಜಿಲ್ಲಾಧಿಕಾರಿಗಳ ಮತ್ತು ಡಿ.ಹೆಚ್.ಓ. ರವರ ನೇತೃತ್ವದಲ್ಲಿ ನೇಮಕಾತಿ ನಡೆಯುತ್ತಿದೆ. ಆದರೆ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುವುದಕ್ಕೆ ಯಾರು ಬರುತ್ತಾರೆ, ಅವರಿಗೂ ಅವಕಾಶ ಕೊಡುತ್ತೇವೆ. ಖಾಯಂ ನೇಮಕಾತಿ ಮಾಡುವುದಕ್ಕೆ ನಮ್ಮ ಸರ್ಕಾರ ಮಂಜೂರಾದ ಹುದ್ದೆಗಳಿಗೆ ತಕ್ಷಣವೇ ಕೆ.ಇ.ಎ. ಮುಖಾಂತರ ನೇಮಕಾತಿ ಮಾಡುತ್ತೇವೆ. ಹೆಚ್ಚುವರಿ ಹುದ್ದೆಗಳಿಗೆ ಏನು ಸರ್ಕಾರಕ್ಕೆ ಬರೆದಿದ್ದಾರೆ ಅದಕ್ಕೆ ಸರ್ಕಾರ ಕೂಡ ಮೌಖಿಕ ಒಪ್ಪಿಗೆ ಕೊಟ್ಟಿದೆ.

ಇನ್ನು ಔಷಧಗಳಿಗೆ ಸಂಬಂಧಪಟ್ಟ ಹಾಗೆ ಇದು ಗಂಭೀರವಾದ ವಿಚಾರ. ಇವತ್ತು ಉತ್ತರ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಒಂದು ನಕಲಿ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿದ್ದು, ಅಲ್ಲಿಂದ ಈ ಕಡೆಗೆ ತಂದು; ಮೊನ್ನೆ ತಾನೇ ನಮ್ಮ Food Safety Department ಮತ್ತು ಪೋಲೀಸ್ ಇಲಾಖೆ ಸುಮಾರು 5 ಕೋಟಿಗಿಂತಲೂ ಅಧಿಕವಾದ, ಬಹುಶಃ ಅದು ದೇಶದಲ್ಲಿಯೇ ದೊಡ್ಡ ಮಟ್ಟದ ನಕಲಿ ಔಷಧಿ ಜಾಲವನ್ನು ಪತ್ತೆ ಹಚ್ಚಿದ್ದಾರೆ. ಅದಕ್ಕೆ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರನ್ನು ಪ್ರಶಂಸಿಸುತ್ತೇನೆ. ಅದಕ್ಕಾಗಿ ಈಗಾಗಲೇ ಗೃಹ ಇಲಾಖೆ ಮತ್ತು ಆರೋಗ್ಯ ಇಲಾಖೆ ಸೇರಿ S.I.T. (Special Investigation Team) ಅನ್ನು ರಚನೆ ಮಾಡಲಾಗಿದೆ. ಏಕೆಂದರೆ, ಈ ಫ್ಯಾಕ್ಟರಿಗಳಿರುವುದು ಬೇರೆ ರಾಜ್ಯಗಳಲ್ಲಿದ್ದು, ಅಲ್ಲಿಂದ ಇಲ್ಲಿಗೆ ತಂದಿದ್ದಾರೆ ಇದು ಕೇವಲ ನಮ್ಮ ರಾಜ್ಯದ ಜಿಲ್ಲೆಯಲ್ಲಿ ಮಾತ್ರವೇ ಅಥವಾ ಬೇರೆ ಬೇರೆ ಜಿಲ್ಲೆಗಳಲ್ಲಿದೆಯೇ ಅಥವಾ ನಮ್ಮ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಈ ಜಾಲ ಇದೆಯೇ ಹಾಗೂ ಯಾವ ಆಸ್ಪತ್ರೆಗೆ ಹೋಗಿದೆ, ಯಾವ ಆಸ್ಪತ್ರೆಗೆ ಕೊಟ್ಟಿದ್ದಾರೆ, ಯಾವ ಫಾರ್ಮಸಿಯವರು ಕೊಟ್ಟಿದ್ದಾರೆ ಎಂಬುದೆಲ್ಲವನ್ನೂ ಪತ್ತೆ ಹಚ್ಚಲು S.I.T. ಅನ್ನು ರಚನೆ ಮಾಡಲಾಗಿದೆ. ಅದೇ ರೀತಿ ಇವತ್ತು ನಮ್ಮ ಸರ್ಕಾರಿ ಆಸ್ಪತ್ರೆಗಳಿಗೆ ಸಂಬಂಧಪಟ್ಟಂತಹ recognised company ಯಿಂದಲೇ expert committee ಯವರು ನಿಗದಿಪಡಿಸಿದ ಔಷಧವನ್ನು ಟೆಂಡರ್ ಮುಖಾಂತರ ಖರೀದಿಸಿ ಕೊಡುವ ಕಾರಣ, ಸರ್ಕಾರಿ ಆಸ್ಪತ್ರೆಯಲ್ಲಿಯೇ ಅದು ಬರಲು ಸಾಧ್ಯವಿಲ್ಲ. ಆದಕಾರಣ ನಾವು ಇಲಾಖೆಯಿಂದ ಎಲ್ಲಾ ಜನೌಷಧಿ ಕೇಂದ್ರಕ್ಕೆ ಸುತ್ತೋಲೆ ಕೊಡಲು ತೀರ್ಮಾನ ಮಾಡಿದ್ದೇವೆ. ಅಲ್ಲಿರುವಂತಹ ಔಷಧಿಗಳನ್ನು ಎರಡೆರಡು ಸಲ ಮರುಪರಿಶೀಲನೆ ಮಾಡಬೇಕೆಂದು ತೀರ್ಮಾನ ಮಾಡಿದ್ದು, ಯಾವ ಆತಂಕವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ ಅದನ್ನು ದೂರ ಮಾಡುವ ಎಲ್ಲಾ ಪ್ರಯತ್ನವನ್ನೂ ನಮ್ಮ ಇಲಾಖೆ ಮಾಡುತ್ತದೆಂದು ಹೇಳಬಯಸುತ್ತೇನೆ.

**ಡಾ: ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಈಗಾಗಲೇ ಅವರು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಅವರಿಗೆ ನಾನು

ಅಭಿನಂದನೆಯನ್ನು ಸಲ್ಲಿಸುತ್ತೇನೆ. ಜೊತೆಗೆ ಎಷ್ಟೋ ಆಸ್ಪತ್ರೆಗಳಲ್ಲಿ ಮೆಷಿನ್‌ಗಳನ್ನು ತರಿಸಿದ್ದಾರೆ, ಅದಕ್ಕೆ technicians ಇಲ್ಲ. ಎಷ್ಟೋ ವರ್ಷಗಳಿಂದ ಆ ಮೆಷಿನ್‌ಗಳನ್ನು ಐದಾರು ಕೋಟಿ ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡಿದ್ದಾರೆ. ಅವುಗಳನ್ನು ಉಪಯೋಗ ಮಾಡುವುದಕ್ಕೆ technicians ಇಲ್ಲವೆಂದು ನೆಪ ಹೇಳುತ್ತಿದ್ದು, ಆ ಮೆಷಿನ್‌ಗಳು ಆಸ್ಪತ್ರೆಗಳಲ್ಲಿ ಹಾಗೆಯೇ ಇವೆ. ಉದಾಹರಣೆಗೆ ಬೌರಿಂಗ್ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮೆಷಿನ್‌ಗಳನ್ನು ಖರೀದಿ ಮಾಡಿ ಐದು ವರ್ಷಗಳಾದರೂ ಒಂದು ದಿವಸವೂ ಉಪಯೋಗ ಮಾಡಿಲ್ಲ. ಇದನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಹಾಗೂ ಅವಧಿ ಮೀರಿದ ಔಷಧಿಗಳನ್ನು ಕೊಡುತ್ತಿದ್ದಾರೆ. ಅದರ ಬಗ್ಗೆ ಗಮನಹರಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ಯಾರಾದರೂ ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಅಥವಾ ಖಾಸಗಿ ಆಸ್ಪತ್ರೆಯಲ್ಲಿ ಅವಧಿ ಮೀರಿದ ಔಷಧಿಗಳನ್ನು ಕೊಟ್ಟರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾರಿಗಾದರೂ ಅವಧಿ ಮೀರಿದ ಔಷಧಿಗಳನ್ನು ಕೊಟ್ಟಿರುವ ಬಗ್ಗೆ ನಮಗೆ ಮಾಹಿತಿ ಕೊಟ್ಟರೆ ಸಾಕು. ಜನಸಾಮಾನ್ಯರ ಸಹಕಾರ ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಅವರ ಸಹಕಾರ ಬೇಕು. ಯಾರಿಗಾದರೂ ಅಂತಹ ಔಷಧಿ ಸಿಕ್ಕಿದರೆ ತಿಳಿಸಬೇಕು ಹಾಗೂ ನಾವು ಕೂಡ ಅದರ ಬಗ್ಗೆ sudden inspection ಮಾಡುತ್ತೇವೆ, ಜನಪ್ರತಿನಿಧಿಗಳು ಕೂಡ ಅದರ ಬಗ್ಗೆ ತಪಾಸಣೆ ಮಾಡಬೇಕು. ಮೆಷಿನ್‌ಗಳಿಗೆ ಸಂಬಂಧಪಟ್ಟ ಹಾಗೆ ನಮ್ಮಲ್ಲಿ ಎಲ್ಲೆಲ್ಲಿ ಮೆಷಿನ್‌ಗಳಿವೆ, ನಮ್ಮ ಇಲಾಖೆಯಲ್ಲಿ technicians ಕೂಡ ಇದ್ದಾರೆ. ಇಂತಹ ಕಡೆಗಳಲ್ಲಿ ಒಬ್ಬರು ಸಾಕಾಗುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಹಗಲು ಮತ್ತು ರಾತ್ರಿಗೆ ಎಂದು ಇಬ್ಬರು ಬೇಕಾಗುತ್ತಾರೆ. ಅಲ್ಲಿಗೆ ಇನ್ನೊಬ್ಬರ ನೇಮಕಾತಿ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಿಯಾದರೂ ಇಂತಹ ಮೆಷಿನ್ ಕೆಟ್ಟು ಹೋಗಿದ್ದು ಅಥವಾ ರಿಪೇರಿ ಮಾಡದೇ ಅಥವಾ ಸಿಬ್ಬಂದಿ ವರ್ಗದವರು ಇಲ್ಲವೆಂದು ಹೇಳಿದರೆ, ನಾವು ಮಾಹಿತಿ ಪಡೆಯಲೆಂದು ಒಂದು toll free number ಅನ್ನು ನಮ್ಮ ಇಲಾಖೆಯ ಮುಖಾಂತರ ಮಾಡಿದ್ದೇವೆ. ಯಾವುದೇ ರೋಗಿಗೆ ಏನಾದರೂ ತೊಂದರೆಯಾದರೆ, ನೇರವಾಗಿ ಈ ನಂಬರ್‌ಗೆ ಫೋನ್ ಮಾಡಬಹುದು. ಅದು ನಮ್ಮ ಇಲಾಖೆಯ website ನಲ್ಲಿ ಇರುತ್ತದೆ. ಯಾರಾದರೂ ಆಸ್ಪತ್ರೆಗೆ ಹೋದಾಗ ಎಕ್ಸ್-ರೇ ಇಲ್ಲ, ಸ್ಕ್ಯಾನಿಂಗ್ ಇಲ್ಲ ಎಂದು ಹೇಳಿದರೆ ಆ ಮಾಹಿತಿಯನ್ನು ನನಗೆ ಕೊಟ್ಟರೆ ಡಿ.ಹೆಚ್.ಓ. ಮುಖಾಂತರ ರಿಪೇರಿ ಮಾಡಿ ಸರಿಪಡಿಸುತ್ತೇವೆ. ಮಾನ್ಯ ಸದಸ್ಯರು ಬೌರಿಂಗ್ ಆಸ್ಪತ್ರೆಯ ಬಗ್ಗೆ ಹೇಳಿದರು. ಆದರೆ, ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಅದು ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಆ ಮಾಹಿತಿಯನ್ನು ಅವರಿಗೆ ಕೊಟ್ಟು ಇದನ್ನು ಸರಿಪಡಿಸುವ ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:-** ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 21ನೇ ಆಗಸ್ಟ್ 2026ರ ಸಮೂಹ-5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 141 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

## ೩. ನಿಯಮ ೫೮ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ಅವರೆ, ನಾನು ಆಗಲೇ ಹೇಳಿದಂತೆ ಶೂನ್ಯವೇಳೆ ಪ್ರಸ್ತಾಪಗಳು ೧೫೦ ಪದಗಳಿಗಿಂತ ಜಾಸ್ತಿ ಇದ್ದರೆ ನಾನು ಅದನ್ನು accept ಮಾಡುವುದಿಲ್ಲ. ಇವತ್ತು ನಿಮಗೆ ವಿನಾಯಿತಿ ಕೊಡುತ್ತೇನೆ. ಮುಂದೆ ಈ ರೀತಿ ಮಾಡಬೇಡಿ.

**ಶ್ರೀ ಐವನ್ ಡಿ'ಸೋಜಾ:-** ಧನ್ಯವಾದಗಳು ಸರ್.

**ಅ) ವಿಷಯ:- ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಒಳಚರಂಡಿ & ಜಲಸಿರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಕುರಿತು.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಒಳಚರಂಡಿ ವ್ಯವಸ್ಥೆಯು ತೀರಾ ಹದಗೆಟ್ಟಿದ್ದು, ಎಸ್.ಟಿ.ಪಿ. ಗಳು ಕಾರ್ಯನಿರ್ವಹಿಸದೇ ರಾಜಕಾಲುವೆಗಳಲ್ಲಿ ಒಳಚರಂಡಿ ನೀರು ಹರಿಯುತ್ತಿದ್ದು, ಈ ನೀರು ಸಾರ್ವಜನಿಕ ಕಾಲುವೆಗಳಲ್ಲಿ ಹರಿದು ನದಿಗಳಿಗೆ ಹರಿಸಲಾಗುತ್ತಿದ್ದು, ಇದರಿಂದ ಜಲಮೂಲಗಳು ಕಲುಷಿತಗೊಂಡು, ಸಾರ್ವಜನಿಕ ತೆರೆದ ಬಾವಿಗಳು, ಕೆರೆಗಳಿಗೆ ಒಳಚರಂಡಿ ನೀರು ಹರಿದು ನಗರಪಾಲಿಕೆ ವ್ಯಾಪ್ತಿಯಲ್ಲಿ ಸೊಳ್ಳೆಗಳು ಮತ್ತಿತರ ಅಂಟುರೋಗ ಹರಡಿ, ಸಾರ್ವಜನಿಕರು ಕಳೆದ ೧೦ ವರ್ಷಗಳಿಂದ ದುರ್ವಾಸನೆ ಪಡೆದು ಬದುಕುತ್ತಿದ್ದಾರೆ ಎಂದು ಮಂಗಳೂರಿನ ಪ್ರಮುಖ ಪತ್ರಿಕೆಗಳು ವರದಿಯನ್ನು ಮಾಡಿದೆ.

ಇತ್ತೀಚಿನ ದಿನಗಳಲ್ಲಿ ಒಳಚರಂಡಿ ಸಂಸ್ಕರಣ ಘಟಕಗಳಿಗೆ ಬರುತ್ತಿರುವ ನೀರು, ಕುಡಿಯುವ ನೀರಿನ ಪೈಪ್‌ನೊಂದಿಗೆ ಸೇರಿಕೊಂಡಿರುವುದು ಆತಂಕದ ವಿಚಾರವಾಗಿದೆ. ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಎಲ್ಲಾ ಹಳೆಯ ಶಿಥಿಲ ವ್ಯವಸ್ಥೆಯಲ್ಲಿರುವ ಕೆಂಪುಕಲ್ಲಿನ ಮೆಶಿನ್‌ಹೋಲ್‌ಗೂ ಸ್ಟೋನ್ವೇರ್ ಪೈಪ್‌ಗಳನ್ನು ಆರ್.ಸಿ.ಸಿ. ಮೆಷಿನ್ ಹೋಲ್‌ಗೂ ಯು.ಪಿ.ವಿ.ಸಿ./ಆರ್.ಸಿ.ಸಿ./ಡಿ.ಐ. ಗೆ ಬದಲಾಯಿಸಲು ಹಾಗೂ ಒಳಚರಂಡಿರಹಿತ ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಎಸ್.ಟಿ.ಪಿ.ಗಳ ಉನ್ನತೀಕರಣ ಮತ್ತು ವೆಟ್‌ವೆಲ್‌ಗಳ ನಿರ್ಮಾಣ, ಸಂಸ್ಕರಿಸಿದ ನೀರಿನ ಬಳಕೆ ಮಾಡಲು ಅಂದಾಜು ಮೊತ್ತ ರೂ.೧,೨೫೦.೦೦ ಕೋಟಿ ಅವಶ್ಯಕತೆ ಇರುತ್ತದೆ ಎಂದು ನಗರಪಾಲಿಕೆ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಅಲ್ಲದೇ ಸರ್ಕಾರದ ಕರ್ನಾಟಕ ವಿಧಾನಮಂಡಲ ಸಾರ್ವಜನಿಕ ಉದ್ಯಮಗಳ ಸಮಿತಿಯು ಈ ಪ್ರದೇಶಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಈ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಸಬೇಕೆಂದು ಸರ್ಕಾರಕ್ಕೆ ಸೂಚಿಸಿದೆ ಮತ್ತು ಇದರ ವರದಿ ಮಂಡನೆ ಆಗಿದೆ.

24X7 ನೀರು ಸರಬರಾಜು ಇನ್ನೂ ಕಾಮಗಾರಿ ಮುಗಿಯದೇ ಮಳೆಗಾಲದಲ್ಲಿಯೂ ಕುಡಿಯುವ ನೀರಿನ ರೇಷನಿಂಗ್ ನಡೆಯುತ್ತಿದೆ. ಪ್ರಸ್ತುತ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 86 ಸಾವಿರ ನೀರಿನ ಸಂಪರ್ಕ ಹೊಂದಿಕೊಂಡಿದ್ದು, ಇದರ ಜೊತೆಗೆ 20 ಸಾವಿರಕ್ಕೂ ಹೆಚ್ಚು ಅಕ್ರಮವಾಗಿ ನೀರಿನ ಸಂಪರ್ಕ ಹೊಂದಿದೆ ಎಂಬ ಅಂಶವು ಒಂದು ಆತಂಕದ ಘಟನೆ ಆಗಿದೆ. ದಿನಕ್ಕೆ 170 ಎಂ.ಎಲ್.ಡಿ. ನೀರು ಬೇಕಾಗಿರುವುದರಿಂದ ನೀರಿನ ಅಭಾವ ಉಂಟಾಗಿದೆ ಎಂದು ನಗರಪಾಲಿಕೆ ತಿಳಿಸಿದೆ.

ಆದುದರಿಂದ ಮಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಪುನರ್ ನಿರ್ಮಾಣ ಕಾಮಗಾರಿ ಹಾಗೂ ಜಲಸಿರಿ ಯೋಜನೆ ಕುಡಿಯುವ ನೀರಿನ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಿ, ನಗರಪಾಲಿಕೆ ವ್ಯಾಪ್ತಿಯ ಜನರಿಗೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕು. ಮಾನ್ಯ ಮಂತ್ರಿಗಳು ಕೂಡಲೇ ಮಂಗಳೂರಿಗೆ ಭೇಟಿ ನೀಡಿ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು. ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಸದನದ ಶೂನ್ಯ ವೇಳೆಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಶೂನ್ಯವೇಳೆಯಲ್ಲಿ ಕೇಳಿದಂತಹ ಪ್ರಶ್ನೆಗಳನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇವೆ, ಅವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಅವರಿಂದ ಉತ್ತರವನ್ನು ಕೊಡಿಸುತ್ತೇವೆ.

**ಆ) ವಿಷಯ:- ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹಾಸ್ಟೆಲ್ ಕಟ್ಟಡದ ಬಾಡಿಗೆ ಹಣ ಪಾವತಿಯಾಗದ ಕುರಿತು.**

- - - -

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 11.8.2026ರಂದು ‘ಸಂಜೆ ವರದಿ’ ದಿನಪತ್ರಿಕೆಯಲ್ಲಿ ಹಾಸ್ಟೆಲ್ ಬಾಡಿಗೆ ಬಾಕಿ, ನ್ಯಾಯಾಲಯದಿಂದ ಸಮಾಜ ಕಲ್ಯಾಣ ಇಲಾಖೆ ಸಾಮಾಗ್ರಿ ಜಪ್ತಿ ಎಂಬ ಶೀರ್ಷಿಕೆಯಡಿ, ಸಿಂಧನೂರು ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಹಾಸ್ಟೆಲ್ ಕಟ್ಟಡದ ಬಾಡಿಗೆ ಹಣ ಪಾವತಿಯಾಗದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿನ ಸಾಮಾಗ್ರಿಗಳನ್ನು ಜಪ್ತಿ ಮಾಡಿರುವ ಘಟನೆ ಸಿಂಧನೂರಿನಲ್ಲಿ ನಡೆದಿದ್ದು, ಹಾಸ್ಟೆಲ್ ಕಟ್ಟಡದ ಮಾಲೀಕರಾದ ಖಾಜಾ ಸಾಬ್ ಅವರಿಗೆ ಹಲವು ದಿನಗಳಿಂದ ಬಾಡಿಗೆ ಹಣ & ಬಡ್ಡಿ ಸೇರಿ 20 ಲಕ್ಷ ಬಾಕಿ ಉಳಿದಿದ್ದು, ಈಗಾಗಲೇ ಒಂದು ಸಾರಿ ಜಪ್ತಿ ಮಾಡಲಾಗಿದ್ದು, 12 ಲಕ್ಷ ಪಾವತಿ ಮಾಡಿ ಉಳಿದ ಹಣ 8 ಲಕ್ಷಕ್ಕಾಗಿ ಎರಡು ತಿಂಗಳ ಕಾಲಾವಕಾಶ ಕೊಟ್ಟರೂ ಸಹ ಹಣ ಪಾವತಿ ಮಾಡದಿದ್ದಾಗ ಕೋರ್ಟ್ ಮತ್ತೊಮ್ಮೆ ಸಮಾಜ ಕಲ್ಯಾಣ ಇಲಾಖೆಯ ಸಾಮಾಗ್ರಿಗಳ ಜಪ್ತಿ ಮಾಡುವಂತೆ ನೋಟೀಸ್ ನೀಡಿದೆ. ಈ ಕುರಿತು ಇಲಾಖೆಯ ಅಧಿಕಾರಿಗಳನ್ನು ವಿಚಾರಿಸಿದಾಗ ಖಾಜಾ ಸಾಬ್ ಅವರಿಗೆ ನೀಡಬೇಕಿರುವ ಬಾಡಿಗೆ ಹಣ ಬಾಕಿಯಿದೆ. ಅದಕ್ಕಾಗಿ ನಮ್ಮ ಇಲಾಖೆಯ ಎಲ್ಲಾ ಸಾಮಾಗ್ರಿಗಳನ್ನು ಜಪ್ತಿ ಮಾಡಲಾಗಿದೆ. ಈ ಕುರಿತು ಇಲಾಖೆಯ ಮೇಲಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ನಟರಾಜ್‌ರವರು ತಿಳಿಸಿರುವುದಾಗಿ ಪತ್ರಿಕೆಯಲ್ಲಿ ವರದಿಯಾಗಿದೆ.

ಆದುದರಿಂದ, ಹಾಸ್ಟೆಲ್‌ನ ಬಾಡಿಗೆ ಹಣ ಪಾವತಿಯಾಗದೆ ಹಲವು ದಿನಗಳಿಂದ ಬಾಕಿ ಉಳಿದಿರುವ ಕಾರಣ, ನ್ಯಾಯಾಲಯದ ಮೂಲಕ ಸಾಮಾಗ್ರಿಗಳನ್ನು ಜಪ್ತಿ ಮಾಡುವ ಪರಿಸ್ಥಿತಿ ನಿರ್ಮಾಣ ಆಗಿದ್ದು, ತಾಲ್ಲೂಕಿನ ಬಡ ಎಸ್.ಸಿ. ಹಾಗೂ ಎಸ್.ಟಿ. ಸಮುದಾಯದ ಮಕ್ಕಳ ಶಿಕ್ಷಣಕ್ಕೆ ತೊಂದರೆಯುಂಟಾಗಿರುವುದರಿಂದ, ಸರ್ಕಾರ ಈ ಕೂಡಲೇ ಸದರಿ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಒದಗಿಸಬೇಕೆಂದು ನಾನು ಸದನದ ಶೂನ್ಯವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರಲು ಅನುಮತಿ ನೀಡುವಂತೆ ಕೋರುತ್ತೇನೆ.

(ಮುಂದು)

(816) 21-08-2026 1-20 KH/BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸನಗೌಡ ಬಾದರ್ಲಿಯವರು ಶೂನ್ಯವೇಳೆಯಲ್ಲಿ ಸರ್ಕಾರದ ಗಮನವನ್ನು ಸೆಳೆದಂತಹ ಪ್ರಶ್ನೆ ಬಹಳ ಗಂಭೀರವಾಗಿದ್ದು, ಇದನ್ನು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ಒದಗಿಸಲಾಗುವುದು.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಛಿತ್ತಿಪತ್ರಗಳನ್ನು ಪ್ರದರ್ಶಿಸುತ್ತಿದ್ದರು)**

**ಇ) ವಿಷಯ:- ದರ್ಬೆ ಸಮೀಪದ ಸಿ.ಟಿ.ಓ. ಬಳಿ ನಿರ್ಮಾಣಗೊಂಡ ಅಲ್ಪಸಂಖ್ಯಾತ ಸಮುದಾಯಭವನವು ಪಾಳು ಬೀಳುವ ಸ್ಥಿತಿಯಲ್ಲಿರುವ ಕುರಿತು.**

- - - - -

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. "ಪಾಳು ಬೀಳುವ ಸ್ಥಿತಿಯಲ್ಲಿ ದರ್ಬೆ ಸಮೀಪದ ಸಿ.ಟಿ.ಓ. ಬಳಿ ನಿರ್ಮಾಣಗೊಂಡಿರುವ ಹೊಸ ಕಟ್ಟಡ", ಅಲ್ಪಸಂಖ್ಯಾತ ಸಮುದಾಯಭವನಕ್ಕಿಲ್ಲ ಉದ್ಘಾಟನೆ ಭಾಗ್ಯ?" ಎಂಬ ಶೀರ್ಷಿಕೆಯಡಿ ದಿನಾಂಕ:20-08-2026ರ ಹೊಸ ದಿಗಂತ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಅಲ್ಪಸಂಖ್ಯಾತ ಯುವಕ-ಯುವತಿಯರಿಗೆ ಉದ್ಯೋಗ ಹಾಗೂ ಇತರ ಮಾಹಿತಿ, ತರಬೇತಿಗಳನ್ನು ನೀಡಲೆಂದು ಹಿಂದಿನ ಸರ್ಕಾರದ ಅವಧಿಯಲ್ಲಿ ನಿರ್ಮಾಣಗೊಂಡ ಸಮುದಾಯಭವನದ ಕಟ್ಟಡವೊಂದು ಉದ್ಘಾಟನೆಗೊಳ್ಳದೇ ಹಾಗೂ ಬಳಕೆಯಾಗದೇ ಪಾಳು ಬೀಳುವ ಸ್ಥಿತಿಯಲ್ಲಿದೆ.

ಯುವ ಸಮುದಾಯದ ಸಬಲೀಕರಣದ ಒಳ್ಳೆಯ ಉದ್ದೇಶದಿಂದ ದರ್ಬೆ ಸಮೀಪದ ಸಿ.ಟಿ.ಓ. ಬಳಿ ನಿರ್ಮಾಣಗೊಂಡಿರುವ ಈ ಕಟ್ಟಡದ ಕಾಮಗಾರಿ ಮುಗಿದು ಮೂರು ವರ್ಷ ಕಳೆದರೂ ಉದ್ಘಾಟನೆಗೊಂಡಿಲ್ಲ. ಇದರ ಪರಿಣಾಮ ಉದ್ದೇಶಿತ ಯೋಜನೆಗಳಿಗೆ ಈ ಕಟ್ಟಡವನ್ನು ಬಳಸಲು ಸಾಧ್ಯವಾಗದಂತೆ ಮಾಡಲಾಗಿದೆ.

ಪುತ್ತೂರಿನ ಹೃದಯ ಭಾಗದಲ್ಲಿ ಸಿ.ಡಿ.ಪಿ.ಓ., ಜಿ.ಪಂ. ಇಂಜಿನಿಯರಿಂಗ್ ಇಲಾಖೆ, ತೆರಿಗೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮೊದಲಾದ ಕಚೇರಿಗಳು ಈ ಪರಿಸರದಲ್ಲಿದೆ. ಈಗ ಹೊಸದಾಗಿ ನಿರ್ಮಾಣವಾಗಿರುವ ಈ ಕಟ್ಟಡ ಅಲ್ಪಸಂಖ್ಯಾತ ಸಮುದಾಯಗಳ ಯುವಕ-ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ, ಉದ್ಯೋಗ ಮಾಹಿತಿ ಮೊದಲಾದ ವಿಚಾರಗಳನ್ನು ನೀಡುವ ಸಮುದಾಯ ಭವನವಾಗಿದೆ.

2022-23ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿಗಮದಿಂದ ಸುಮಾರು 1.40 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಕಟ್ಟಡ ನಿರ್ಮಿಸಲಾಗಿದೆ. ಇದರಲ್ಲಿ ಕೇಂದ್ರ ಸರ್ಕಾರದಿಂದ ಶೇಕಡಾ 75 ರಷ್ಟು ಹಾಗೂ ರಾಜ್ಯ ಸರ್ಕಾರದಿಂದ ಶೇಕಡಾ 25 ರಷ್ಟು ಅನುಪಾತದಲ್ಲಿ ಈ ಕಟ್ಟಡ ನಿರ್ಮಾಣವಾಗಿದೆ.

ಸಮುದಾಯಗಳ ಅವಶ್ಯಕತೆಯನ್ನು ಮನಗಂಡು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನಿರ್ಮಾಣಗೊಂಡಿರುವ ಕಟ್ಟಡವನ್ನು ಪಾಳು ಬೀಳುವ ಸ್ಥಿತಿಗೆ ಕೊಂಡೊಯ್ಯುತ್ತಿರುವುದು ನಿಜಕ್ಕೂ ವಿಪರ್ಯಾಸ.

ತಕ್ಷಣವೇ ಈ ಬಗ್ಗೆ ಸರ್ಕಾರ ಮತ್ತು ಅಧಿಕಾರಿಗಳು ಗಮನಹರಿಸಬೇಕಿದೆ ಎಂಬುದು ಸಾರ್ವಜನಿಕರ ವಲಯ ಹಾಗೂ ಅಲ್ಪಸಂಖ್ಯಾತ ಸಮುದಾಯದ ಪ್ರಮುಖರ ಬೇಡಿಕೆಯಾಗಿದೆ.

ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ಸಮುದಾಯಭವನದ ಉದ್ಘಾಟನೆಗೆ ಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕಾಗಿ ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮಂಜುನಾಥ್ ಭಂಡಾರಿಯವರು ಅತ್ಯುತ್ತಮವಾದ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ಬಹುಶಃ ಇವತ್ತು ಪುತ್ತೂರಿನ ದರ್ಬೆಯಲ್ಲಿ ಮಾತ್ರವಲ್ಲ, ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಎಷ್ಟು ಸಮುದಾಯಭವನಗಳು ಪೂರ್ಣಗೊಂಡಿದೆ. ಎಷ್ಟು ಸಮುದಾಯಭವನಗಳು ಮಂಜೂರಾಗಿದೆ, ಎಷ್ಟು ಸಮುದಾಯಭವನಗಳು ಬಾಕಿ ಇವೆ ಎನ್ನುವ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಎಲ್ಲಿ ಸಮುದಾಯಭವನಗಳು ಪೂರ್ಣಗೊಂಡಿವೆ, ಅದನ್ನು ಆದಷ್ಟು ಬೇಗ ಸ್ಥಳೀಯ ಮಟ್ಟದ ಜನರಲ್ಲಿ ಚರ್ಚಿಸಿ, ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿ, ಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ಖಂಡಿತವಾಗಿಯೂ ಆದೇಶ ಮಾಡುತ್ತೇನೆ. ಹಾಗೆಯೇ ಸಮುದಾಯಭವನಗಳು ಅರ್ಧದಲ್ಲಿ ಎಲ್ಲಿ ಬಾಕಿ ಇವೆ, ಏಕೆ ಬಾಕಿ ಇದೆ ಎಂದು ಕಾರಣ ನೋಡಿಕೊಂಡು, ಅದನ್ನು ಕೂಡ ಪೂರ್ಣಗೊಳಿಸುವುದಕ್ಕೆ ಸಹಕಾರ ಇಲಾಖೆ ಕಾರ್ಯಬದ್ಧವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಲ್ಪಸಂಖ್ಯಾತ ಸಮುದಾಯದ ಪರವಾಗಿ ಮಾನ್ಯ ಮಂಜುನಾಥ್ ಭಂಡಾರಿಯವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಶೂನ್ಯ ವೇಳೆಯಲ್ಲಿ ಎತ್ತಿರುವ ವಿಷಯಕ್ಕೆ written reply ಕಳುಹಿಸಬೇಕು.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ ಮುಖಾಂತರ written reply ಅನ್ನು ಕಳುಹಿಸಿಕೊಡುತ್ತೇನೆ.

**ಈ) ವಿಷಯ:- ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ನೀಡಬೇಕಾದ ಮೂಲಸೌಕರ್ಯಗಳನ್ನು ಪೂರೈಕೆ ಮಾಡುವ ಕುರಿತು.**

- - - - -

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಮಂಡಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ:21-08-2026 ರಂದು ರಾಜ್ಯದ ಪ್ರತಿಷ್ಠಿತ 'ಮಲೆನಾಡು ಸುದ್ದಿ ಭಾರತಿ' ದಿನಪತ್ರಿಕೆಯಲ್ಲಿ ರೂ.8.72 ಕೋಟಿ ಟೆಂಡರ್ ಸಮವಸ್ತ್ರ, ಶೂ ಪೂರೈಕೆ ವಿಳಂಬ ಅಲ್ಪಸಂಖ್ಯಾತ ಇಲಾಖೆಯ ಟೆಂಡರ್ ಪ್ರಕ್ರಿಯೆ ಬಗ್ಗೆ ಗಂಭೀರ ಪ್ರಶ್ನೆಗಳು ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಪೂರೈಸಬೇಕಾದ ಸಮವಸ್ತ್ರ, ಶೂ ಹಾಗೂ ಸಾಕ್ಸ್‌ಗಳ ವಿತರಣೆಯಲ್ಲಿ ವಿಳಂಬವಾಗಿರುವ ಆರೋಪಗಳು ಇದೀಗ ಗಂಭೀರ ಚರ್ಚೆಗೆ ಕಾರಣವಾಗಿದೆ. 2025-26ನೇ ಶೈಕ್ಷಣಿಕ ಸಾಲಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಎರಡು ಜೊತೆ ಸಿದ್ಧಪಡಿಸಿದ ಸಮವಸ್ತ್ರಗಳು, ಎರಡು ಜೊತೆ ಸಾಕ್ಸ್, ಟೈ ಮತ್ತು ಬೆಲ್ಟ್‌ಗಳನ್ನು ಪೂರೈಸಲು ಸುಮಾರು ರೂ.8.72 ಕೋಟಿ ಮೌಲ್ಯದ ಟೆಂಡರ್ ದಾಖಲೆಗಳ ಪ್ರಕಾರ ವಿದ್ಯಾರ್ಥಿಗಳ ನೈಜ ದಾಖಲಾತಿಗೆ ಅನುಗುಣವಾಗಿ ಶಾಲಾವಾರು ಬಂಡಲ್‌ಗಳನ್ನು ಸಿದ್ಧಪಡಿಸಿ, ವಿದ್ಯಾರ್ಥಿಗಳ ಅಳತೆಗೆ ತಕ್ಕಂತೆ ಸಮವಸ್ತ್ರಗಳನ್ನು ನೇರವಾಗಿ ಶಾಲೆಗಳಿಗೆ ಪೂರೈಸಬೇಕು. ಗುಣಮಟ್ಟದ ಪ್ರಮಾಣ ಹಾಗೂ ಅಳತೆ ಪರಿಶೀಲಿಸಿದ ಬಳಿಕವೇ ಶಾಲಾ ಮುಖ್ಯಸ್ಥರಿಂದ ಸ್ವೀಕೃತಿ ಪಡೆಯಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಆದರೆ, ಶೈಕ್ಷಣಿಕ ವರ್ಷ ಆರಂಭವಾಗಿ ತಿಂಗಳು ಕಳೆದರೂ ಕೆಲವು ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಹಾಗೂ ಸಾಕ್ಸ್‌ಗಳು ಇನ್ನೂ ತಲುಪಿಲ್ಲವೇ? ಎಂಬ ಪ್ರಶ್ನೆ ಇದೀಗ ಎದುರಾಗಿದೆ.

ಒಂದೇ ಸಂಸ್ಥೆಗಳ ಸುತ್ತ ಟೆಂಡರ್? ಕೆಲವು ವರ್ಷಗಳಿಂದ ದೊಡ್ಡ ಪ್ರಮಾಣದ ಟೆಂಡರ್‌ಗಳು ಕೆಲವೇ ಸಂಸ್ಥೆಗಳಿಗೆ ದೊರೆಯುತ್ತಿವೆ ಎಂಬ ಆರೋಪಗಳು ಕೇಳಿಬಂದಿವೆ. ಟೆಂಡರ್ ಆಹ್ವಾನಿಸುವ ಮುನ್ನವೇ ನಿರ್ದಿಷ್ಟ ಸಂಸ್ಥೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ಅರ್ಹತಾ ಷರತ್ತುಗಳನ್ನು ರೂಪಿಸಲಾಗುತ್ತಿದೆ. ಈ ಆರೋಪಗಳಲ್ಲಿ ಸತ್ಯಾಂಶವಿದೆಯೇ? ಎಂಬುದಕ್ಕೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸ್ಪಷ್ಟನೆ ನೀಡಬೇಕಾಗಿದೆ.

ಎಂ.ಎಸ್.ಎಂ.ಇ.,ಗಳಿಗೆ ಸಮಾನ ಅವಕಾಶ ಸಿಗುತ್ತಿದೆಯೇ? ಕೊಟ್ಯಾಂತರ ಟೆಂಡರ್‌ಗೆ ವೇಗ; ಮಕ್ಕಳಿಗೆ ಸೌಲಭ್ಯದಲ್ಲಿ ವಿಳಂಬ ಏಕೆ? ಉರ್ದು ಮತ್ತು ಅಲ್ಪಸಂಖ್ಯಾತ ಶಾಲೆಗಳತ್ತ ನಿರ್ಲಕ್ಷ್ಯವೇ? ಕಳೆದ ಮೂರು ವರ್ಷಗಳಲ್ಲಿ ಸಮವಸ್ತ್ರ ಮತ್ತು ಶೂ ಪೂರೈಕೆಯ ಟೆಂಡರ್‌ಗಳನ್ನು ಯಾರಿಗೆ ನೀಡಲಾಗಿದೆ? ಟೆಂಡರ್ ಪಡೆದ ಸಂಸ್ಥೆಗಳು ಎಂ.ಎಸ್.ಎಂ.ಇ. ಅಥವಾ ಸ್ಥಳೀಯ ಉತ್ಪಾದಕರೇ? ಕಳೆದ ಮೂರು ವರ್ಷಗಳ ಟೆಂಡರ್ ಮೊತ್ತ ಹಾಗೂ ಗುತ್ತಿಗೆದಾರರ ಸಂಪೂರ್ಣ ವಿವರವನ್ನು ಸಾರ್ವಜನಿಕಗೊಳಿಸಲಾಗಿದೆಯೇ? 2025-26ನೇ ಸಾಲಿನಲ್ಲಿ ಎಷ್ಟು ಶಾಲೆಗಳಿಗೆ ಶೂ ಮತ್ತು ಸಾಕ್ಸ್‌ಗಳನ್ನು ಪೂರೈಸಲಾಗಿದೆ. ಇನ್ನೂ ಎಷ್ಟು ಶಾಲೆಗಳಿಗೆ ಪೂರೈಕೆ ಬಾಕಿಯಿದೆ? ಪೂರೈಕೆ ವಿಳಂಬವಾಗಿದ್ದರೆ ಅದಕ್ಕೆ ಹೊಣೆಗಾರರು ಯಾರು? ಟೆಂಡರ್ ಷರತ್ತುಗಳನ್ನು ನಿರ್ದಿಷ್ಟ ಸಂಸ್ಥೆಗಳಿಗೆ ಅನುಕೂಲವಾಗುವಂತೆ ರೂಪಿಸಲಾಗಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸಲಾಗುವುದೇ?

ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಪೂರೈಸಬೇಕಾದ ಸಮವಸ್ತ್ರ, ಶೂ ಹಾಗೂ ಸಾಕ್ಸ್‌ಗಳ ವಿತರಣೆ ತುರ್ತಾಗಿ ಪೂರೈಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲು ಮಾನ್ಯ ಅಲ್ಪಸಂಖ್ಯಾತ ಇಲಾಖಾ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಲ್ಕೀಸ್ ಬಾನುರವರು ಶೂನ್ಯವೇಳೆ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದು, ಇಲಾಖೆಯವರ ಜೊತೆ ಚರ್ಚಿಸಿ, ವರದಿಯನ್ನು ತರಿಸಿಕೊಂಡು ನಾಳೆ ಉತ್ತರವನ್ನು ಒದಗಿಸುತ್ತೇನೆ.

## 4. ವರದಿಯನ್ನೊಪ್ಪಿಸುವುದು

**ಶ್ರೀ ಮಂಜುನಾಥ್ ಭಂಡಾರಿ (ಅಧ್ಯಕ್ಷರು, ಹಕ್ಕುಬಾಧ್ಯತಾ ಸಮಿತಿ):-** ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2015 ರೀತ್ಯಾ 2025-26ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 105ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಈಗಾಗಲೇ ನಾನು ಯಾರೂ ಕೂಡ ಇಲ್ಲಿಗೆ placards ತೆಗೆದುಕೊಂಡು ಬರಬಾರದು ಎಂದು ಮೊನ್ನೆಯ ದಿವಸ ಹೇಳಿದ್ದೇನೆ. ಆದರೂ ಕೂಡ ಅದನ್ನು ಉಲ್ಲಂಘನೆ ಮಾಡಿದ್ದೀರಿ. ದಯವಿಟ್ಟು ತಮ್ಮ ಸದಸ್ಯರುಗಳಿಗೆ ಆ placards ಅನ್ನು ಕೆಳಗೆ ಇಡಿ ಎಂದು ಹೇಳಬೇಕು. ಏಕೆಂದರೆ, ಈಗಾಗಲೇ ನಾವು ಯಾರೂ ಕೂಡ ಈ ಸದನದಲ್ಲಿ placards ತರಬಾರದು ಎನ್ನುವ ಸಂದೇಶವನ್ನು ಕೊಟ್ಟಿದ್ದೇವೆ. ದಯವಿಟ್ಟು ಮಾನ್ಯ ಸದಸ್ಯರುಗಳಿಗೆ ಕೆಳಗೆ ಇಡುವುದಕ್ಕೆ ಹೇಳಿ.

**ಶ್ರೀ ಮಂಜುನಾಥ ಭಂಡಾರಿ:-** ಮಾನ್ಯ ಸಭಾಪತಿಯವರೇ, ಅದನ್ನು ಹೊರಗಡೆ ಕಳುಹಿಸಿ.

**ಸಭಾಪತಿಯವರು:-** ಮಾನ್ಯ ಮಂಜುನಾಥ ಭಂಡಾರಿಯವರೇ, ಒಂದು ನಿಮಿಷ. ಕೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಫೈಲ್‌ನಲ್ಲಿ ಬರೆದಿರುವಂಥದ್ದು. ಇದು placards ಅಲ್ಲ. ಇದು ಪ್ರಿಂಟ್ ಮಾಡಿರುವಂಥದ್ದಲ್ಲ.

**ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ರೀತಿ ಉತ್ತರವನ್ನು ಕೊಟ್ಟರೆ ಇವರಿಗೆ ಏನು ಹೇಳಬೇಕು? ಇವರು ಈ ರೀತಿ ಜನರನ್ನು ಮೂರ್ಖರನ್ನಾಗಿ ಮಾಡಿದರೆ ಹೇಗೆ? ಇವರು ನಮ್ಮನ್ನೇ ಮೂರ್ಖರನ್ನಾಗಿ ಮಾಡುವವರು. ಇನ್ನು ಇವರೆಲ್ಲರೂ ಜನರನ್ನು ಬಿಡುತ್ತಾರೆಯೇ? ಇವರು ಸಭಾಪತಿಯವರನ್ನೇ ಮೂರ್ಖರನ್ನಾಗಿ ಮಾಡುವುದಕ್ಕೆ ಪ್ರಯತ್ನಪಡುವವರು ಇನ್ನು ಜನರನ್ನು ಬಿಡುತ್ತಾರೆಯೇ? ಅವರನ್ನು ಮೂರ್ಖರನ್ನಾಗಿ ಮಾಡದೆ ಬಿಡುತ್ತಾರೆಯೇ?

**(ಗೊಂದಲ)**

(ಮುಂದು)

(817) 21-8-2026 1.30 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

(ಗೊಂದಲ)

**ಸಭಾಪತಿಯವರು:-** ನಿಮಗೆ ಎಷ್ಟು ಹೇಳಿದರೂ ಕೂಡ ಅರ್ಥವಾಗುವುದಿಲ್ಲ. ನಮಗೆ ನಾಚಿಕೆ ಆಗುವಂತಹ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಸದನದಲ್ಲಿ ಇಂತಹ ಕೆಲಸಗಳನ್ನು ಮಾಡಬಾರದು ಎಂದು ಹೇಳಿದರೆ ನಾವು ಫೈಲ್ ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ ಜನರು ನಮ್ಮನ್ನು ನೋಡುತ್ತಿದ್ದಾರೆ. ಇವತ್ತು ನಾವೇ ಮಾಡಿದಂತಹ ನಿಯಮಗಳನ್ನು ಪಾಲನೆ ಮಾಡದಿದ್ದರೆ ಸರಿಯಾಗುವುದಿಲ್ಲ. ದಯವಿಟ್ಟು ನೀವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಇನ್ನು ನಾನೇನು ಹೇಳುವುದಕ್ಕಾಗುವುದಿಲ್ಲ. ನಾವು ನಮ್ಮ ಫೈಲ್‌ನಲ್ಲಿ ಬರೆದಿದ್ದೇವೆ ಎಂದು ಹೇಳುವುದು ನಿಜವಾಗಿಯೂ ಇದೊಂದು ದುರಂತ ಎಂದು ನಾನು ಹೇಳಬೇಕಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಅವಕಾಶ ಕೊಡಿ. ಮೊನ್ನೆ ನಡೆದಂತಹ......

**ಸಭಾಪತಿಯವರು:-** ಅವಕಾಶ ಕೊಡುವುದಿಲ್ಲ. ನೀವು ನನ್ನ ಮಾತನ್ನು ಕೇಳುವುದಕ್ಕೆ ತಯಾರಿಲ್ಲ ಎಂದ ಮೇಲೆ ನಾನು ಏಕೆ ನಿಮ್ಮ ಮಾತನ್ನು ಕೇಳಬೇಕು? ಮೊನ್ನೆ ನಾನು ಬಹಳಷ್ಟು ಹೇಳಿದ್ದರೂ ಕೂಡ ನೀವು ನನ್ನ ಮಾತನ್ನು ಕೇಳಿಲ್ಲ. ಇದೊಂದು ದುರ್ದೈವ ಎಂದು ನಾನು ಹೇಳಬೇಕಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ವಿಜಯಾನಂದ ಕಾಶಪ್ಪರವರು ದಲಿತರನ್ನು ಅಪಮಾನ ಮಾಡಿದ್ದಾರೆ.

(ಗೊಂದಲ)

**5. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಕಾರ್ಯದರ್ಶಿ, ಕವಿಪ:-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026

2. ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026

3. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2026

**(ಗೊಂದಲ)**

**ಶ್ರೀ ಶಿವಣ್ಣ ಬಿ.ಎಸ್.:-** ಮಾನ್ಯ ಸಭಾಪತಿಯವರೇ,.......

**ಸಭಾಪತಿಯವರು:-** ಆಯಿತು, ಕುಳಿತುಕೊಳ್ಳಿ. Nothing will go on record.

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** ಮಾನ್ಯ ಸಭಾಪತಿಯವರೇ, ವಿಧೇಯಕ ತೆಗೆದುಕೊಳ್ಳುವುದಕ್ಕಿಂತ ಮೊದಲು ನಾನು ಕೂಡ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುತ್ತೇನೆ. ಇದರಲ್ಲಿ ನಾವು ರಾಜಕೀಯ ಬೆರೆಸುವುದು ಬೇಡ. ಈ ಸದನದಲ್ಲಿ ಶಿಸ್ತನ್ನು ಪಾಲಿಸಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದ ಸಂಪ್ರದಾಯವನ್ನು ಮುರಿಯಬಾರದು.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

ಮಾನ್ಯ ಸಭಾಪತಿಯವರು ಹೇಳಿದ ಹಾಗೆ ವಿರೋಧ ಪಕ್ಷದ ಸದಸ್ಯರುಗಳು placard ದಯವಿಟ್ಟು ಕೆಳಗೆ ಇಳಿಸಿ. ಮಾನವೀಯತೆಯನ್ನು ಇಟ್ಟುಕೊಳ್ಳಿ. ಒಂದು ಪೀಠಕ್ಕೆ ಕನಿಷ್ಠ ಗೌರವ ಇಟ್ಟುಕೊಳ್ಳಿ. ನಿಮಗೇನು ಮಾನ-ಮರ್ಯಾದೆ ಇಲ್ಲವೇ? ಮಾನ್ಯ ಸಭಾಪತಿಯವರು ಹೇಳುತ್ತಿದ್ದಾರೆ, ದಯವಿಟ್ಟು ಅದನ್ನು ಕೆಳಗಡೆ ಇಡಿ. ಮಾನ್ಯ ಗೋಪಿನಾಥ್‌ರವರೇ, ದಯವಿಟ್ಟು placard ಕೆಳಗಡೆ ಇಡಿ. We are Ok with the slogan.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

ನೀವು slogan ಮಾಡುವುದಕ್ಕೆ ತಕರಾರು ಇಲ್ಲ. ಆದರೆ, placard ಕೆಳಗಡೆ ಇಳಿಸಬೇಕೆಂದು request ಮಾಡಿದ್ದಾರೆ. ದಯವಿಟ್ಟು ಮಾನ್ಯ ಸಭಾಪತಿಯವರಿಗೆ ಗೌರವ ಕೊಡಿ.

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ. ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ಒಂದು ಸರಳ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ. ಒಂದು ಲಕ್ಷಕ್ಕಿಂತ ಹೆಚ್ಚು ಕುಟುಂಬಗಳಿಗೆ ಬಹಳ ದೊಡ್ಡ ಅನುಕೂಲ ಮಾಡಿಕೊಡುವಂತಹ, ಬಹಳ ದೊಡ್ಡ ವಿನಾಯಿತಿ ಪರಿಹಾರ ಕೊಡುವಂತಹ ಕೆಲಸವನ್ನು ಈ ತಿದ್ದುಪಡಿ ವಿಧೇಯಕದ ಮುಖಾಂತರ ಮಾಡುತ್ತಿದ್ದೇವೆ. ಇದರ ಹಿನ್ನಲೆ ಏನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸುಮಾರು ಐತಿಹಾಸಿಕ ಬಡಾವಣೆಗಳನ್ನು ಮಾಡಿಕೊಂಡು ಬಂದಿದೆ. ಕೆಲವು ಕಡೆ ಭೂಸ್ವಾಧೀನ ಆದಮೇಲೆ ಅಲ್ಲಿ ಮೂಲ ಮಾಲೀಕರು ಅಥವಾ ಯಾರೋ ಬೇರೆಯವರು ಅನಧಿಕೃತವಾಗಿ ಬಡಾವಣೆ ಮಾಡಿ, ಅಲ್ಲಿ ಮನೆಗಳು ಕೂಡ ಬಂದುಬಿಟ್ಟಿವೆ. ಬಿ.ಡಿ.ಎ.,ಗೆ ಸ್ವಾಧೀನವಾಗಿರುವಂತಹ ಜಮೀನಿನಲ್ಲಿ ಸುಮಾರು 1,11,560 ಅನಧಿಕೃತ ಮನೆಗಳು ನಿರ್ಮಾಣವಾಗಿರುವುದನ್ನು ನಾವು ಗುರುತಿಸಿದ್ದೇವೆ. ಅವರು ಮನೆ ಕಟ್ಟಿಕೊಂಡಿದ್ದಾರೆ. ಆದರೆ ಅವರಿಗೆ ಖಾತೆ ಪಕ್ಕಾ ಆಗುವುದಿಲ್ಲ. ದಾಖಲೆ ಪಕ್ಕಾ ಆಗುವುದಿಲ್ಲ, ಅದು ಮಕ್ಕಳಿಗೆ ಅಥವಾ ಪರಭಾರೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಅವರು ಮನೆ ಕಟ್ಟಿಕೊಂಡಿದ್ದರೂ ಕೂಡ ತ್ರಿಶಂಕು ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಅವರಿಗೆ ನೆಮ್ಮದಿಯಿಂದ ಬದುಕುವುದಕ್ಕೆ ಆಗುತ್ತಿಲ್ಲ. ಒಂದು ರೀತಿ ಮಕ್ಕಳಿಗೆ ಏನಾದರೂಂದು ಆಸ್ತಿಯನ್ನು ಬಿಟ್ಟುಕೊಟ್ಟು ಅವರಿಗೆ ನೆಮ್ಮದಿ ಕೊಡುವುದಕ್ಕೂ ಕೂಡ ಆಗುತ್ತಿಲ್ಲ. ಹಾಗಾಗಿ ಅವರೆಲ್ಲರಿಗೂ ಕೂಡ ನಾವು ಒನ್ ಟೈಮ್ ರಿಲೀಫ್ ಅನ್ನು ಕೊಟ್ಟು ಪಕ್ಕಾ ದಾಖಲೆಗಳು ಮಾಡಿಕೊಡಬೇಕೆಂದು ಹಿಂದೆ ತೀರ್ಮಾನವಾಗಿ ಅದಕ್ಕೆ ಕೆಲವು ಶುಲ್ಕಗಳನ್ನು ನಿಗದಿ ಮಾಡಿದ್ದಾರೆ. ಆ ಶುಲ್ಕ ದುಬಾರಿ ಇದೆ ಎಂದು ಅದರಲ್ಲಿ ಮತ್ತಷ್ಟು ವಿನಾಯಿತಿ ಕೊಡಬೇಕೆಂದು ಕೇಳಿದಾಗ ಈಗ ಶುಲ್ಕಗಳಿಗೆ ವಿನಾಯಿತಿ ಕೊಡುವುದಕ್ಕೆ ಅಂದರೆ ಶುಲ್ಕ ಕಡಿಮೆ ಮಾಡುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದೇವೆ. 20'x30' ನಿವೇಶನ ಆಗಿದ್ದರೆ, ಹಿಂದೆ guidance value ನಲ್ಲಿ ಶೇಕಡ 10 ರಷ್ಟು ಕಟ್ಟಬೇಕು ಎಂದು ಇತ್ತು. ಅದನ್ನು ಈಗ ಶೇಕಡ 5 ಕ್ಕೆ ಇಳಸುತ್ತಿದ್ದೇವೆ. 30X40 ನಿವೇಶನವಾದರೆ ಹಿಂದೆ 25 percent

of the guidance value ಕಟ್ಟಬೇಕಾಗಿತ್ತು, ಅದನ್ನು ಈಗ ಶೇಕಡ ಹನ್ನೆರಡೂವರೆಗೆ ಕಡಿತ ಮಾಡುತ್ತಿದ್ದೇವೆ. ಅರ್ಧಕರ್ಧ ಕಡಿತ ಮಾಡುತ್ತಿದ್ದೇವೆ. 40x60 ಇದ್ದರೆ ಹಿಂದೆ ಶೇಕಡ 40 ರಷ್ಟು guidance value ಕಟ್ಟಬೇಕಾಗಿತ್ತು. ಅದನ್ನು ಶೇಕಡ 20 ರಷ್ಟಕ್ಕೆ ಕಡಿತ ಮಾಡುತ್ತಿದ್ದೇವೆ. Above 40' X 60' upto 50' X 80' ಇದ್ದರೆ ಮೊದಲು 50 percent of the guidance value ಕಟ್ಟಬೇಕಾಗಿತ್ತು. ಅದನ್ನು ಈಗ ಅರ್ಧ ಮಾಡಿ ಬರೀ 25 percent of the guidance value ಮಾಡುತ್ತಿದ್ದೇವೆ. ಇದರಿಂದ 1,11,560 ಕುಟುಂಬಗಳಿಗೆ ಪಕ್ಕಾ ಆಸ್ತಿ ಮಾಡಿಕೊಡುವುದಲ್ಲದೆ ಅವರು ಕಟ್ಟಬೇಕಾಗಿರುವಂತಹ ಶುಲ್ಕದಲ್ಲಿ ದೊಡ್ಡ ವಿನಾಯಿತಿ ಕೊಡುವುದರ ಮುಖಾಂತರ ಒಂದು ಜನಪರ ಹೆಜ್ಜೆಯನ್ನು ಸರ್ಕಾರ ಇಟ್ಟಿದೆ. ಮಧ್ಯಮ ವರ್ಗದ ಜನಗಳಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಇದೇ ತಿದ್ದುಪಡಿಯಲ್ಲಿ ಅದರ ಜೊತೆಗೆ ಬಿ.ಡಿ.ಎ. ಕಮೀಷನರ್‌ಗೆ ಯಾವುದೇ ಒಂದು ಕಾಮಗಾರಿ ತೆಗೆದುಕೊಳ್ಳುವುದಕ್ಕೆ ಐವತ್ತು ಲಕ್ಷ ರೂಪಾಯಿಗಳವರೆಗೆ ಮಾತ್ರ ಅವಕಾಶ ಇತ್ತು. ಈಗ ಐದು ಕೋಟಿ ರೂಪಾಯಿಗಳವರೆಗೆ ಅಧಿಕಾರ ಕೊಡುತ್ತಿದ್ದೇವೆ. ಈ ವಿಧೇಯಕದ ತಿದ್ದುಪಡಿಯನ್ನು ಅನುಮೋದಿಸಿ ಕೊಡಬೇಕೆಂದು ಸದನವನ್ನು ಕೋಡುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

**ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ/**unedited copy**/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಸ್ತಾವದ ಅಂಗೀಕಾರ

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ. ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

**(818) 21/08/2026 1:40 ಎಸ್‌ಪಿಆರ್/ಕೆಎಸ್** **(ಸಭಾಪತಿಯವರ ಉಪಸ್ಥಿತಿ)**

**ಆ) ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026 ರ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ತಮಗೆ ತಿಳಿದ ಹಾಗೆ, ಸದರಿ ಪ್ರಾಧಿಕಾರ ಸುಮಾರು ಏಳೆಂಟು ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿದೆ. ಇದರಲ್ಲಿ ಕಂದಾಯ ಸಚಿವರು ಪದನಿಮಿತ್ತ ಉಪಾಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ, ಇವರನ್ನು ನೇಮಕ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿಕೊಡುತ್ತಿದ್ದೇವೆ. ಇದರ ಜೊತೆಗೆ, ಬೆಂಗಳೂರಿನ ನಗರ ಸಚಿವರು ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ಸಚಿವರು ಮತ್ತು ಬೆಂಗಳೂರು ಗ್ರಾಮಾಂತರ ಸಚಿವರುಗಳನ್ನು ಈ ಪ್ರಾಧಿಕಾರದ ಸದಸ್ಯರನ್ನಾಗಿ ಮಾಡುವುದಕ್ಕೆ ತಿದ್ದುಪಡಿ ಅವಕಾಶ. ಹಾಗೂ ಇದಲ್ಲದೇ ಒಬ್ಬ ಇತಿಹಾಸ ವಿಷಯ ತಜ್ಞರನ್ನೂ ಕೂಡ ಸದಸ್ಯರನ್ನಾಗಿ ಮಾಡುವುದಕ್ಕೆ ಈ ಪ್ರಾಧಿಕಾರದ ಕಾನೂನಿನಲ್ಲಿ ಅವಕಾಶವನ್ನು ಮಾಡುತ್ತಿದ್ದೇವೆ. ಈ ಪ್ರಾಧಿಕಾರ ಇನ್ನಷ್ಟು ಸುಲಲಿತವಾಗಿ ಕೆಲಸ ಮಾಡಬೇಕು ಎಂಬ ಉದ್ದೇಶದಿಂದ ಅವಕಾಶಗಳನ್ನು ಮಾಡಿಕೊಡುತ್ತಿದ್ದೇವೆ. ಇದಕ್ಕೆ ಸದನ ಅನುಮೋದನೆ ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ರ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026 ರ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026 ರ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಯಾರೇ ಒಬ್ಬರು ಒಂದು ಬಡಾವಣೆಯನ್ನು ಮಾಡಬೇಕಾದರೆ, ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯ ಕಾಯ್ದೆಯಡಿ ಅನುಮತಿಯನ್ನು ಪಡೆದುಕೊಂಡು ಅವರು ಬಡಾವಣೆಯನ್ನು ಮಾಡಬೇಕು. ಅನುಮತಿಯನ್ನು ನೀಡಿದಾಗ ಅವರಿಗೆ ಮೊದಲ ಶೇಕಡಾ 40ರಷ್ಟು ನಿವೇಶನಗಳನ್ನು ಮಾರಾಟ ಮಾಡುವುದಕ್ಕೆ ಕಾನೂನಿನಡಿ ಅನುಮತಿಯನ್ನು ನೀಡಲಾಗುತ್ತದೆ. ನಂತರದಲ್ಲಿ ಇನ್ನುಳಿದ ನಿವೇಶನಗಳನ್ನು ಇಡೀ ಬಡಾವಣೆಯ ಅಭಿವೃದ್ಧಿ ಕೆಲಸಗಳನ್ನು ಪೂರ್ಣಗೊಳಿಸಿದರೆ, ಶೇಕಡಾ 30 ರಷ್ಟು ನಿವೇಶನಗಳನ್ನು ಮತ್ತು ಕೊನೆಯದಾಗಿ ಎಲ್ಲಾ ಕೆಲಸಗಳು ಪೂರ್ಣಗೊಂಡ ನಂತರ ಇನ್ನುಳಿದ ಶೇಕಡಾ 30 ರಷ್ಟು ನಿವೇಶನಗಳನ್ನು ಮಾರಾಟಕ್ಕೆ ಕೊಡುತ್ತಾರೆ. ಈ ರೀತಿಯಾಗಿ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಸಮಯವನ್ನೂ ಸಹ ನಿಗದಿಗೊಳಿಸಲಾಗಿರುತ್ತದೆ. ಅವರೇನಾದರೂ, ನಿಗದಿತ ಸಮಯದಲ್ಲಿ ಅದನ್ನು ಪೂರ್ಣಗೊಳಿಸಿಲ್ಲವೆಂದಾದರೆ, Act ನ violation ಆಗುತ್ತದೆ. ಇಂತಹವುಗಳು 2005 ರಿಂದ 2015 ರವರೆಗಿನ ಅವಧಿಯಲ್ಲಿ ಮಾತ್ರ ಅಂದರೆ, ಈ timeline ಮಾತ್ರವೇ ಯಾರು intime ನಲ್ಲಿ ಬಡಾವಣೆಯ ಅಭಿವೃದ್ಧಿ ಕೆಲಸಗಳನ್ನು ಪೂರ್ಣಗೊಳಿಸಿಲ್ಲವೋ, ಇವರಿಗೆ ಒಂದು ವರ್ಷದ ಅವಧಿಯವರೆಗೆ ವಿನಾಯಿತಿಯನ್ನು ಕೊಟ್ಟು guidance value ನ ಶೇಕಡಾ 3 ರಷ್ಟು ದಂಡವನ್ನು ಕಟ್ಟಿಸಿಕೊಂಡು, ಆ ಬಡಾವಣೆಯ ಅಭಿವೃದ್ಧಿ ಕೆಲಸಗಳು ಪೂರ್ಣಗೊಂಡ ನಂತರ ನಿಗದಿತ ಅವಧಿ ಮೀರಿದ್ದರೂ ಕೂಡ subject to completion of the development works, penalty of three percent (3%) of the guidance value ಅನ್ನು ಕಟ್ಟಿಸಿಕೊಂಡು, ಅವರಿಗೆ ಬಾಕಿ ನಿವೇಶನಗಳನ್ನು ಬಿಡುಗಡೆ ಮಾಡುವುದಕ್ಕೆ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ. ಇದರಿಂದ ಕೆಲವರಿಗೆ ಸಾಕಷ್ಟು ಅನುಕೂಲವಾಗುತ್ತದೆ. ಹೀಗಾಗಿ ಈ ವಿಧೇಯಕವನ್ನು ಅನುಮೋದಿಸಿಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ
ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ
ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

## ಪ್ರಸ್ತಾವದ ಅಂಗೀಕಾರ

**ಶ್ರೀ ಕೃಷ್ಣಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026 ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

(819)21-08-2026 1-50/bkp-md (ಸಭಾಪತಿಯವರ ಉಪಸ್ಥಿತಿ)

7. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ: ರಾಜ್ಯದಲ್ಲಿ ಬಿಪಿಎಲ್ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರದಿಂದ/ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಲ್ಯಾಪ್‌ಟಾಪ್ ಒದಗಿಸಿ ಸರ್ಕಾರಿ ಕಾಲೇಜುಗಳಲ್ಲಿ ಡಿಜಿಟಲ್ ಸೌಲಭ್ಯ ಕಲ್ಪಿಸುವ ಕುರಿತು.**

- - - - -

**ಶ್ರೀ ಬಿ.ಎಸ್. ಶಿವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಬಿಪಿಎಲ್ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರದಿಂದ/ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಲ್ಯಾಪ್‌ಟಾಪ್ ಒದಗಿಸಿ ಸರ್ಕಾರಿ ಕಾಲೇಜುಗಳಲ್ಲಿ ಡಿಜಿಟಲ್ ಸೌಲಭ್ಯ ಕಲ್ಪಿಸುವ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು) (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ...

(ಉತ್ತರವನ್ನು ಲಗತ್ತಿಸಿದೆ)

**ಶ್ರೀ ಬಿ.ಎಸ್. ಶಿವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು 430 ಕ್ಕೂ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ 100 ಕ್ಕೂ ಹೆಚ್ಚು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಿದ್ದು, ಅದರಲ್ಲಿ ಒಟ್ಟು 4 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಲ್ಲಿ ಶೇಕಡಾ 70 ಕ್ಕೂ ಹೆಚ್ಚು ವಿದ್ಯಾರ್ಥಿಗಳ ಆದಾಯ ಮಿತಿ 2.5 ಲಕ್ಷದಿಂದ 8 ಲಕ್ಷಕ್ಕಿಂತ ಕಡಿಮೆ ಇದ್ದು ಮತ್ತು ಗ್ರಾಮೀಣ ಹಿನ್ನೆಲೆಯ ಕುಟುಂಬದವರಾಗಿದ್ದಾರೆ. UGC ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯ ಬದಲಾದ ನಿಯಮಗಳ ಪ್ರಕಾರ ಪದವಿ, ವೃತ್ತಿಪರ ಶಿಕ್ಷಣದ ಶೇಕಡಾ 60 ಕ್ಕೂ ಹೆಚ್ಚು ಪಠ್ಯಕ್ರಮವು ಡಿಜಿಟಲ್ ಪ್ರಾಜೆಕ್ಟ್, ಆನ್‌ಲೈನ್ ರಿಸರ್ಚ್, ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಒಳಗೊಂಡಿದೆ. ಆದರೆ ಬಿಪಿಎಲ್ ಕುಟುಂಬಗಳ ಬಹುತೇಕ ವಿದ್ಯಾರ್ಥಿಗಳು ಸ್ವಂತ ಲ್ಯಾಪ್‌ಟಾಪ್ ಇಲ್ಲದೆ ಅಥವಾ ಕಂಪ್ಯೂಟರ್ ಸೌಲಭ್ಯವಿಲ್ಲದೆ ಹಿನ್ನಡೆ ಅನುಭವಿಸುತ್ತಿದ್ದಾರೆ. ಹಿಂದೆ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ವಿದ್ಯಾಸಿರಿ ಮತ್ತು ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಒದಗಿಸುತ್ತಿತ್ತು. ಇವತ್ತು ಡಿಜಿಟಲ್ ಯುಗ, Artificial Intelligence ಇವತ್ತು ವ್ಯಾಪಕವಾಗಿ ಚೀನಾ ಮತ್ತು ಅಮೆರಿಕದಲ್ಲಿ ದಾಪುಗಾಲು ಹಾಕುತ್ತಿದೆ. ಇವತ್ತು ನಮ್ಮ ಭಾರತೀಯ ವಿದ್ಯಾರ್ಥಿಗಳು, ಅದರಲ್ಲಿಯೂ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳು ಆ ಡಿಜಿಟಲ್ ಯುಗವನ್ನು compete ಮಾಡಲಿಕ್ಕೆ ಬಹಳ ಕಷ್ಟ ಆಗಿದೆ. ಅವರಿಗೆ ಉಚಿತವಾದ ಲ್ಯಾಪ್‌ಟಾಪ್‌ಗಳನ್ನು ಸರ್ಕಾರದಿಂದ ಕೊಡಬೇಕು. ನಿಮ್ಮ C.S.R. (Corporate Social Responsibility) Fund ಇದೆ. ನಮ್ಮ MP-LAD (Member of Parliament Local Area Development Scheme), MLA-LAD (Member of Legislative Assembly Local Area Development scheme) ಇದೆ, ನಮ್ಮ ಶಾಸಕರ ಅನುದಾನ ಇದೆ. ಅದರಲ್ಲಿ ಕನಿಷ್ಠ 25% ಅನುದಾನಗಳಿಂದಾದರೂ ನಾವು ಬಡವರ ಮಕ್ಕಳಿಗೆ, ಗ್ರಾಮೀಣ ಪ್ರದೇಶದ ಬಡ ಪ್ರತಿಭಾವಂತ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ಕೊಡತಕ್ಕಂಥ ಒಂದು ಕೆಲಸವಾಗಬೇಕು. ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಬೇಕಾಗಿದೆ. ಈಗಾಗಲೇ ತಮಿಳುನಾಡಿನ ಟಿವಿಕೆ ಪಕ್ಷದ ಮುಖ್ಯಮಂತ್ರಿಯಾಗಿರುವ ಶ್ರೀ ವಿಜಯ್ ಜೋಸೆಫ್‌ರವರು 2,000 ಕೋಟಿ ರೂಪಾಯಿಗಳನ್ನು ಉಚಿತವಾಗಿ ಲ್ಯಾಪ್‌ಟಾಪ್ ಕೊಡಲಿಕ್ಕೆ ಅವರು ಘೋಷಣೆ ಮಾಡಿದ್ದಾರೆ. ನಾವು ಕೂಡ ಕರ್ನಾಟಕದಲ್ಲಿ, ಮುಖ್ಯಮಂತ್ರಿಗಳೇನು ಇವತ್ತು Aritificial Intelligence University ಮಾಡುತ್ತೇನೆಂದು ಘೋಷಣೆ ಮಾಡಿ, ಮತ್ತೆ ವಿದ್ಯಾರ್ಥಿಗಳಿಗೆ free bus pass ಕೊಟ್ಟಿದ್ದಾರೆ. ಅದೇ ರೀತಿ ತಾವು ಕೂಡ ಉನ್ನತ ಶಿಕ್ಷಣ ಸಚಿವರಾಗಿ, ಬಹಳ ವಿಚಾರವಂತರಾಗಿ, ಅನೇಕ ಹಿರಿಯ ಅನುಭವಿ ಶಾಸಕರಾಗಿರುತ್ತೀರಿ. ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಇವತ್ತು ಲ್ಯಾಪ್‌ಟಾಪ್ ಇಲ್ಲದೆ ವಿದ್ಯಾರ್ಥಿಗಳು ಬಹಳ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ದಯಮಾಡಿ ಗ್ರಾಮೀಣ ಪ್ರದೇಶದ ಬಿಪಿಎಲ್ ಕಾರ್ಡ್‌ನ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತವಾದ ಲ್ಯಾಪ್‌ಟಾಪ್ ಕೊಡುವುದರ ಮೂಲಕ, ಕರ್ನಾಟಕ ಸರ್ಕಾರ, ಕೇಂದ್ರದ ನರೇಂದ್ರ ಮೋದಿಯವರ ಸರ್ಕಾರ ಕೇವಲ 'Digital India' ಎಂದು ಘೋಷಣೆ ಮಾಡುತ್ತದೆ. ಆದರೆ

ಇದುವರೆಗೂ ವಿದ್ಯಾರ್ಥಿಗಳಿಗೆ ಏನೂ ಸಹಾಯ ಮಾಡಿಲ್ಲ. ದಯಮಾಡಿ ತಾವು ಈ ನಿಟ್ಟಿನಲ್ಲಿ ಅತ್ಯಂತ ಜರೂರಾದ ನಿರ್ಣಯವನ್ನು ತೆಗೆದುಕೊಳ್ಳಬೇಕು. ಮತ್ತೊಂದು ತಮ್ಮಲ್ಲಿ submission ಮಾಡುತ್ತೇನೆ. ಇವತ್ತು ವಿದ್ಯಾರ್ಥಿಗಳಿಗೆ, B.C.A. (Bachelor of Computer Application) ಮಾಡುವವರಿಗೆ B.E. (Bachelor of Engineering) ಮಾಡುವವರಿಗೆ M.B.B.S. (Bachelor of Medicine, Bachelor of Surgery) ಡೆಂಟಲ್ ವಿದ್ಯಾರ್ಥಿಗಳು ಕೂಡ, ಲ್ಯಾಪ್‌ಟಾಪ್ ತುಂಬಾ ಅವಶ್ಯಕತೆ ಇದೆ. ಲ್ಯಾಪ್‌ಟಾಪ್ ಇಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 500 ವಿದ್ಯಾರ್ಥಿಗಳಿಗೆ ಕೇವಲ 10-15 ಕಂಪ್ಯೂಟರ್ ಇರುತ್ತದೆ. ಅಲ್ಲಿ ಇಂಟರ್ನೆಟ್ ಸೌಲಭ್ಯಗಳು ಇರಲ್ಲ. ಬಹಳ ಕಷ್ಟ ಆಗುತ್ತಿದೆ. ಇವತ್ತು ಜಾಗತಿಕ ಸ್ಪರ್ಧೆಯಲ್ಲಿ ನಮ್ಮ ಭಾರತೀಯ ವಿದ್ಯಾರ್ಥಿಗಳು ಸ್ಪರ್ಧೆ ಮಾಡಲಿಕ್ಕೆ ಆಗುತ್ತಿಲ್ಲ. ದಯಮಾಡಿ ತಾವು ಬಹಳ ವಿಚಾರವಂತರು, ಉನ್ನತ ಶಿಕ್ಷಣ ಇಲಾಖೆಯನ್ನು ಎರಡು ಮೂರು ಬಾರಿ ನಡೆಸಿದ್ದೀರಿ. ಕ್ಯಾಬಿನೆಟ್‌ನಲ್ಲಿ ಮತ್ತೆ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿ, ಬಡ ಮಕ್ಕಳಿಗೆ, underprivileged students, those who are economically weaker section ಮಕ್ಕಳಿಗೆ, ಉಚಿತವಾದ ಲ್ಯಾಪ್‌ಟಾಪ್ ಕೊಡುವುದರ ಮೂಲಕ ಇಡೀ ಕರ್ನಾಟಕ ಸರ್ಕಾರ ಭಾರತೀಯ ವಿದ್ಯಾರ್ಥಿಗಳಿಗೆ ಒಂದು ಸ್ಪಷ್ಟ ಸಂದೇಶವನ್ನು ಕೊಡಬೇಕು ಅಂತ ನಿಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ನಾವೇನು ನಮಗೆ ಅನುದಾನ ಬರುತ್ತೆ M.L.A. ಗಳಿಗೆ, M.L.C. ಗಳಿಗೆ, ಅಲ್ಲಿ ಕನಿಷ್ಠ 25% ಅನುದಾನವನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ಕೊಡಲಿಕ್ಕೆ ನಮಗೆ ಅನುಮತಿ ನೀಡಬೇಕು ಅಂತ ಹೊಸ ಆದೇಶ ಮಾಡಬೇಕು ಅಂತ ತಮ್ಮಲ್ಲಿ ಕೋರುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಗಳೇ, ಸನ್ಮಾನ್ಯ ಶ್ರೀ ಶಿವಣ್ಣನವರು ಏನು ಗಮನ ಸರ್ಕಾರದ ಸೆಳೆದಿದ್ದಾರೆ, ಅದು ಉತ್ತಮವಾದಂತಹ ಸಲಹೆ, ಅದನ್ನು ನಾನು ಒಪ್ಪುತ್ತೇನೆ. ಹಿಂದೆ ನಾನು 2016-17ರಲ್ಲಿ ಉನ್ನತ ಶಿಕ್ಷಣ ಮಂತ್ರಿಯಾಗಿದ್ದಾಗ ನಾನು ಉತ್ತರ ನೀಡಿದ್ದೇನೆ. ರಾಜ್ಯದಲ್ಲಿ ಓದುತ್ತಿರುವಂತಹ ತಾಂತ್ರಿಕ ಶಿಕ್ಷಣದಲ್ಲಿ ಓದುತ್ತಿರುವಂತಹ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾದಂತಹ ಲ್ಯಾಪ್‌ಟಾಪ್ ಅನ್ನು ಕೊಟ್ಟಿದ್ದೆವು. ಅವತ್ತು ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಸಿದ್ಧರಾಮಯ್ಯನವರು ನಮ್ಮ ಈ ಬಜೆಟ್‌ನಲ್ಲಿ ಪ್ರಸ್ತಾಪನೆಯನ್ನು ಮಾಡಿ ಹಣ ಒದಗಿಸಿದ್ದರು. ತದನಂತರ 2017-18ರಲ್ಲಿ ಕೂಡ, ರಾಜ್ಯದಲ್ಲಿ ಓದುತ್ತಿರುವಂತಹ ಸರ್ಕಾರಿ ಪದವಿ ಕಾಲೇಜುಗಳೇನಿವೆ, ಯಾರಿಗೆ ಆದಾಯ ₹2.5 ಲಕ್ಷಕ್ಕಿಂತ ಕಡಿಮೆ ಇರುವಂತಹ ಏನು ವಿದ್ಯಾರ್ಥಿಗಳಿದ್ದಾರೆ, ಸುಮಾರು 1,10,000 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಅನ್ನು ನೀಡಬೇಕು ಅನ್ನುವುದನ್ನು ತೀರ್ಮಾನ ಮಾಡಿ 2017-18ರಲ್ಲಿ ವಿತರಣೆ ಮಾಡಬೇಕಾದಂತಹ ಸಂದರ್ಭದಲ್ಲಿ ಅದು ನಿಧಾನವಾದ್ದರಿಂದ 2019-20ರಲ್ಲಿ ಮುಂದಿನ ಸರ್ಕಾರ ಕೊಟ್ಟಿತು. ಆದರೆ ಅದನ್ನು ಕೊಟ್ಟಿದ್ದು ಕೂಡ ಹಿಂದಿನ ಸಿದ್ಧರಾಮಯ್ಯನವರ ಸರ್ಕಾರವೇ; ಎರಡೂ ವರ್ಷಗಳು ಕೂಡ ಸಿದ್ಧರಾಮಯ್ಯನವರ ಸರ್ಕಾರವೇ ಲ್ಯಾಪ್‌ಟಾಪ್ ಅನ್ನು ಕೊಟ್ಟಿತ್ತು. ಈ

ವರ್ಷ 2026-27ನೇ ಸಾಲಿನ ಬಜೆಟ್ ಅನ್ನು ನಮ್ಮ ಮುಖ್ಯಮಂತ್ರಿಗಳು, ಹಿಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಕೊಟ್ಟುಬಿಟ್ಟಿದ್ದಾರೆ. ಕೊಟ್ಟ ನಂತರ ನೂತನ ಸರ್ಕಾರ ಬಂದಿದೆ. ನೂತನ ಸರ್ಕಾರ ಬಂದಿದ್ದು ಆಗಸ್ಟ್ ತಿಂಗಳಲ್ಲಿ. ಹೀಗಾಗಿ, ಬಜೆಟ್ ಪಾಸ್ ಆಗಿ ಹೊರಟು ಹೋಗಿಬಿಟ್ಟಿದೆ. ಅದಕ್ಕೆ ಬಜೆಟ್‌ನಲ್ಲಿ 2026-27ನೇ ಸಾಲಿನಲ್ಲಿ ಈ ಲ್ಯಾಪ್‌ಟಾಪ್‌ಗಳನ್ನು ಕೊಡಲಿಕ್ಕೆ provision ಮಾಡಿಲ್ಲ. ನಮ್ಮ ನೂತನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಡಿ.ಕೆ.ಶಿವಕುಮಾರ್ ಅವರಿಗೆ ವಿದ್ಯಾರ್ಥಿಗಳ ಬಗ್ಗೆ ಬಹಳಷ್ಟು ಕಳಕಳಿ ಇದೆ. ವಿದ್ಯಾರ್ಥಿಗಳ ಬಗ್ಗೆ ಕಳಕಳಿ ಇದೆ ಮತ್ತು ಈ ಶಿಕ್ಷಣ ವ್ಯವಸ್ಥೆಯನ್ನು ಬಹಳ ಸುಧಾರಣೆ ಮಾಡಬೇಕು ಎನ್ನುವಂತಹ ಕಳಕಳಿ ಅವರಿಗೆ ಇದೆ. ಇದನ್ನು ಅವರ ಗಮನಕ್ಕೆ ತಂದು, ಈ ವರ್ಷ ಸಾಧ್ಯವಾದರೆ ಹೆಚ್ಚುವರಿ ಆಯವ್ಯಯವನ್ನು ಮಾಡಲಿಕ್ಕೆ ಸಾಧ್ಯನಾ ನೋಡುತ್ತೇವೆ. ಹಣಕಾಸಿನ ಪರಿಸ್ಥಿತಿ ನೋಡಬೇಕು. ಇಲ್ಲದಿದ್ದರೆ, ಮುಂದಿನ ಆರ್ಥಿಕ ವರ್ಷದಲ್ಲಿ ಆದ್ಯತೆಯ ಮೇರೆಗೆ ಇದನ್ನು ಸೇರಿಸಬೇಕು ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಎರಡನೆಯದಾಗಿ, ಅವರು ಏನು ಕೇಳಿದ್ದಾರೆ ಎಂದರೆ, ಈ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಏನು ₹2 ಕೋಟಿ ರೂಪಾಯಿ ಕೊಡ್ತಾರೆ, ಅದರಲ್ಲಿ ಕೂಡ ನೀವು ಲ್ಯಾಪ್‌ಟಾಪ್ ಅನ್ನು ಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತಾರೆ. ಅದು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಶಾಸಕರ ಪ್ರದೇಶಾಭಿವೃದ್ಧಿ ಬರುವುದಿಲ್ಲ. ಅದು ಯೋಜನಾ ಇಲಾಖೆಗೆ ಬರುತ್ತದೆ. ಮತ್ತು ಈ ಯೋಜನೆಯನ್ನು ಸೇರಿಸಲಿಕ್ಕೆ ಏನೇನು ಗೈಡ್‌ಲೈನ್ಸ್ ಇದೆ ಅನ್ನೋದನ್ನ ತಮ್ಮ ಗಮನಕ್ಕೆ ತಂದಿದ್ದೇನೆ. ಈ ಗೈಡ್‌ಲೈನ್‌ನಲ್ಲಿ ಕೂಡ ಅದನ್ನು ಮಾಡಲಿಕ್ಕೆ ಅವಕಾಶಗಳಿಲ್ಲ, ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ. ಅದಕ್ಕೆ ಅದನ್ನೇನಾದರೂ ಸಾಧ್ಯವಾದರೆ ಯೋಜನಾ ಮಂತ್ರಿಗಳ ಗಮನಕ್ಕೆ ತಂದು, ಅದಕ್ಕೊಂದು ತಿದ್ದುಪಡಿ ಮಾಡಿ ಉತ್ತಮವಾದ ಸಲಹೆ ಕೊಟ್ಟಿದ್ದಾರೆ, ಅದನ್ನು ಪರಿಗಣಿಸಬೇಕು ಎಂದು ಮಾನ್ಯ ಯೋಜನಾ ಮಂತ್ರಿಗಳಿಗೆ ಹೇಳುತ್ತೇನೆ.

**ಸಭಾಪತಿಯವರು:-** ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾಡುತ್ತೇನೆ.

**ಸಭಾಪತಿಯವರು:-** ಶ್ರೀ ಡಿ.ಎಸ್. ಅರುಣ್.

(ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ಸರ್ಕಾರದ ವಿರುದ್ಧ ಘೋಷಣೆ ಕೂಗುವುದರಲ್ಲಿ ನಿರತರಾಗಿದ್ದರು)

ಆ) **ವಿಷಯ: ಕರ್ನಾಟಕ ರಾಜ್ಯದಲ್ಲಿ ಗೊಲ್ಲ ಸಮುದಾಯಕ್ಕೆ ಪ್ರತ್ಯೇಕ 'ಯಾದವ ಗೊಲ್ಲ ನಿಗಮ'ವನ್ನು ಸ್ಥಾಪಿಸುವ ಕುರಿತು.**

-----

**ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ):-** ಧನ್ಯವಾದಗಳು ಸಭಾಪತಿಗಳೇ. ಕರ್ನಾಟಕ ರಾಜ್ಯದಲ್ಲಿ ಗೊಲ್ಲ ಸಮುದಾಯಕ್ಕೆ ಪ್ರತ್ಯೇಕ 'ಯಾದವ ಗೊಲ್ಲ ನಿಗಮ'ವನ್ನು ಸ್ಥಾಪಿಸುವ ಕುರಿತು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಗಮನ ಸೆಳೆಯಲು ಬಯಸುತ್ತಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು) (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಹಿಂದುಳಿದ ವರ್ಗಗಳ ಮಂತ್ರಿಗಳು ಈಗ ಸದನದಲ್ಲಿ ಉಪಸ್ಥಿತರಿಲ್ಲ. ಅದಕ್ಕೆ ಅವರಿಗೆ ಪರಿಣಾಮಕಾರಿಯಾಗಿ ಉತ್ತರವನ್ನು ಕೊಡಿಸಲಿಕ್ಕೆ ಅವರಿಂದಲೇ ಪ್ರಯತ್ನ ಮಾಡುತ್ತೇನೆ. ಏಕೆಂದರೆ commitment ಇರುವುದರಿಂದ...

**ಸಭಾಪತಿಯವರು:-** ಮಾನ್ಯ ನಾಗರಾಜ್‌ರವರೆ, ಆಗಬಹುದಾ?

**ಶ್ರೀ ಎಂ. ನಾಗರಾಜು:-** ಸರ್ಕಾರ ಉತ್ತರ ಕೊಟ್ಟಿದೆ. ನಾನು ಓದಿದ್ದೇನೆ. ಆದರೆ ನಾನು ಹೇಳುತ್ತೇನೆ ಕೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೇ, ನನಗೆ ಒಂದು ನಿಮಿಷ ಅವಕಾಶ ಕೊಡಿ. ಹಿಂದುಳಿದ ವರ್ಗಗಳ ಕಲ್ಯಾಣ ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕು. ಈ ಉತ್ತರವನ್ನು ಕೊಟ್ಟಿದ್ದಾರೆ, ಅವರು ನೋಡಿಕೊಂಡ ಮೇಲೆ ಕೆಲವು ವಿಚಾರಗಳನ್ನು ನಾನು ಇಲಾಖೆಯಿಂದ ಚರ್ಚೆ ಮಾಡಿ ಮಾತಾಡಬೇಕು.

**ಸಭಾಪತಿಯವರು:-** ಮಾನ್ಯ ನಾಗರಾಜ್‌ರವರೆ, ಇದನ್ನು ಸೋಮವಾರದ ದಿವಸ ತೆಗೆದುಕೊಳುತ್ತೇನೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಚಿವರೇ, ಒಂದೇ ನಿಮಿಷ ನಮ್ಮ ಮಾತನ್ನು ಕೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ನಿಯಮಾವಳಿಯನ್ನು ತಿಳಿದುಕೊಳ್ಳಿ.

**ಸಭಾಪತಿಯವರು:-** ಅವರು ಹೇಳಲಿ, ಆಮೇಲೆ ಉತ್ತರ ಕೊಡಿ ಪರವಾಗಿಲ್ಲ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಗಳೇ, ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಈಗ ಅವರು ಉತ್ತರವನ್ನು ಕೊಟ್ಟಿದ್ದಾರೆ, ಇದು ಮೊದಲನೇ ಬಾರಿಗೆ ಕೊಟ್ಟಂತ ಉತ್ತರ ಅಲ್ಲ. 2022ರಲ್ಲಿ ಈ ಪ್ರಶ್ನೆಯನ್ನು ಕೇಳಿ,

4 ವರ್ಷಗಳಿಂದ ಕೇಳುತ್ತಾ ಇದ್ದೇವೆ. ಯಾದವ ಸಮುದಾಯ, ಗೊಲ್ಲ ಸಮುದಾಯವು ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದ ಸಮುದಾಯ ಎಂದು ಹೇಳಿ ಸ್ಪಷ್ಟವಾಗಿ ಹೇಳಿದರೂ ಕೂಡ, 4 ವರ್ಷಗಳಿಂದ ನಿಗಮ ಮಾಡಲಿಕ್ಕೆ ಆಗಲಿಲ್ಲ ಅನ್ನೋದಾದ್ರೆ... ಬೇಕಾದಂತೆ ಬೇರೆ ಬೇರೆ ನಿಗಮಗಳಿಗೂ, ಬೇರೆ ಬೇರೆ ಸಮುದಾಯಗಳಿಗೆ ಈಗಾಗಲೇ ಹಲವಾರು ನಿಗಮಗಳನ್ನು ಸ್ಥಾಪನೆ ಮಾಡಲಾಗಿದೆ. ಆದರೆ ನಮ್ಮ ಸಮುದಾಯಕ್ಕೆ ಯಾವ ಕಾರಣಕ್ಕೋಸ್ಕರ ಮಾಡಲಿಲ್ಲ ಎನ್ನತಕ್ಕಂಥ ವಿಚಾರವನ್ನು ಕೇಳುತ್ತಿದ್ದೇನೆ. ಬೇರೆ ಸಮುದಾಯಗಳಿಗೆ ದೇವರಾಜ ಅರಸು ನಿಗಮದ ಅಡಿಯಲ್ಲಿ ಬರರತಕ್ಕಂತ ಹಲವಾರು ಸಮುದಾಯಗಳಿಗೆ ನಿಗಮ ಕೊಟ್ಟಿರತಕ್ಕಂತ ಸಂದರ್ಭದಲ್ಲಿ, ನಮ್ಮ ಸಮುದಾಯಕ್ಕೆ ಕಳೆದ 4 ವರ್ಷಗಳಿಂದ ಈ ಒಂದು ಅನ್ಯಾಯವನ್ನು ಸರಿಪಡಿಸಲಿಕ್ಕೆ ಕೇಳುತ್ತಿದ್ದೇವೆ.

(ಮುಂದು)

**(820) 21.08.2026 02.00 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ. ನಾಗರಾಜು (ಮುಂದು):-**

ಕೇವಲ ನಮಗೆ ಸಬೂಬುಗಳನ್ನು ಕೊಡತಕ್ಕಂಥದ್ದು, ಕೇವಲ ನಾವು ಮಾಡುತ್ತೇವೆನ್ನುವ ಆಶ್ವಾಸನೆಗಳನ್ನು ಕೊಡುವಂಥದ್ದು ನ್ಯಾಯಸಮ್ಮತವಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿರುವಂಥ ಯಾದವ ಸಮುದಾಯ, ಗೊಲ್ಲ ಸಮುದಾಯವು ಅತಿ ಹಿಂದುಳಿದ ಸಮಾಜವಾಗಿದೆ. ಹಾಗಾಗಿ ಈ ಉತ್ತರವನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಮತ್ತೊಮ್ಮೆ ವಿಸ್ತೃತವಾಗಿ ಚರ್ಚೆ ಮಾಡಬೇಕು.

**ಸಭಾಪತಿಯವರು:-** ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಎಂ. ನಾಗರಾಜು:-** ಧನ್ಯವಾದಗಳು.

## ೮. ಪ್ರಕಟಣೆ

**"ಕರ್ನಾಟಕ ವಿಧಾನ ಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

– – – – –

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 21.08.2026ರಂದು ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಯೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ, 2026
2. ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2026
3. ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೆ, ಕಾರ್ಯಕಲಾಪ ಪಟ್ಟಿ ಮುಕ್ತಾಯವಾಗಿದೆ. ಮಾನ್ಯ ವಿರೋಧ ಪಕ್ಷದ ಸದಸ್ಯರೆ, ಒಂದು ನಿಮಿಷ...

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಲೇ ಇದ್ದರು)**

ಒಂದು ನಿಮಿಷ.. ಸ್ವಲ್ಪ ತಾಳ್ಮೆ ಇರಲಿ. ಪ್ರತಿಭಟನೆ ಮಾಡುವುದಕ್ಕೆ ನಿಮಗೆ ಅವಕಾಶವಿದೆ. ಈಗಾಗಲೇ ಅಜೆಂಡಾ ಎಲ್ಲಾ ಮುಗಿದಿದೆ. ಮುಖ್ಯಮಂತ್ರಿಯವರು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೆ, ಏನಾದರೂ ಹೇಳುವಿರಾ?

**(ವಿರೋಧ ಪಕ್ಷದ ಮಾನ್ಯ ಸದಸ್ಯರು ನಿರಂತರವಾಗಿ ಘೋಷಣೆಗಳನ್ನು ಕೂಗಲಾರಂಭಿಸಿದರು)**

**ಸಭಾಪತಿಯವರು:-** ಎರಡು ನಿಮಿಷ ಸುಮ್ಮನಿರಿ. ಮುಖ್ಯಮಂತ್ರಿಗಳು ಏನು ಹೇಳುತ್ತಾರೆಯೋ ಕೇಳೋಣ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆಯೋ ಕೇಳೋಣ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ, ಸಿಹಿ ಸುದ್ದಿ ತಂದಿದ್ದಾರೆ, ಬಹುಶಃ ರಾಜೀನಾಮೆ ಕೊಡಿಸಬಹುದು ಅಂತ ನಾವಂದುಕೊಂಡಿದ್ದೇವೆ. ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ರೈತರ ವಿಷಯ ಚರ್ಚೆ ಮಾಡಬೇಕಾಗಿದೆ. ಹಾಗಾಗಿ ಸಿಹಿ ಸುದ್ದಿ ತಂದಿದ್ದಾರೆ ಎಂದುಕೊಂಡಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಆಯಿತು... ಆಯಿತು.... ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಡಿ.ಕೆ.ಶಿವಕುಮಾರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರು ಹೋರಾಟ ಮಾಡುತ್ತಿರುವುದಕ್ಕೆ ನನ್ನದೇನೂ ತಕರಾರಿಲ್ಲ. ಅವರು ನ್ಯಾಯ ಕೇಳುತ್ತಿದ್ದಾರೆ. ನಾನು ಹಿಂದೆ ನಮ್ಮ ಪಕ್ಷದ ಅಧ್ಯಕ್ಷನಾಗಿದ್ದಾಗ ನಾನೇ ಹೋಗಿ ಇದು ತನಿಖೆಯಾಗಲಪ್ಪ, ರಾಜೀನಾಮೆ ಕೊಡು ಎಂದು ಹೇಳಿ ರಾಜೀನಾಮೆ ಕೊಡಿಸಿದ್ದೆನು. ನಾವು ಏನು ಬೇಕೋ ತನಿಖೆ ಮಾಡಿಸಿದ್ದೇವೆ. ಈಗ ಅವರು ರಾಜೀನಾಮೆ ಕೊಡಬೇಕೆಂದು ಕೇಳುತ್ತಿದ್ದಾರೆ. ರಾಜೀನಾಮೆ ಕೊಡಬೇಕಾದರೆ ಕೇಳಲಿ. ತಮಗೆ ಒಂದು ನೋಟಿಸ್ ಕೊಟ್ಟು ಏಕೆ ರಾಜೀನಾಮೆ ಕೊಡಬೇಕು, ಅವರು ಏನೇನು ಕಂಡುಹಿಡಿದಿದ್ದಾರೆ, ಅವರ ಹತ್ತಿರ ಏನೇನು ಮಾಹಿತಿಯಿದೆ, ಸಿ.ಬಿ.ಐ

ನವರು ಏನು ಕೊಟ್ಟರು, ಇ.ಡಿ. ಅವರು ಏನು ಕೊಟ್ಟರು, ಎಸ್. ಐ. ಟಿ ಏನು ಕೊಟ್ಟರು ಅದೆಲ್ಲವನ್ನೂ ತಂದು ಜನರ ಮುಂದೆ ಇಟ್ಟು ಜನರಿಗೆ ಗೊತ್ತಾಗಿ ಇದಕ್ಕೋಸ್ಕರ ನಾನು ರಾಜೀನಾಮೆ ಕೇಳುತ್ತಿದ್ದೇನೆ ಎಂದು ಹೇಳಿದರೆ ಆ ಸ್ಥಾನಕ್ಕೆ ಗೌರವ ಇರುತ್ತದೆ. ವಿರೋಧ ಪಕ್ಷದ ನಾಯಕರು ಸಾಂವಿಧಾನಿಕ ಹುದ್ದೆಯಲ್ಲಿರುವವರು. ಅದು ಬಿಟ್ಟು ಚರ್ಚೆಯನ್ನೂ ಮಾಡುವುದಿಲ್ಲ, ಬಾವಿಗೂ ಬರುವುದಿಲ್ಲ, ನೋಟಿಸ್ ಕೂಡ ಕೊಡುವುದಿಲ್ಲ. ಅದನ್ನು ಬಿಟ್ಟು ರಾಜೀನಾಮೆ ಕೊಡಿ, ರಾಜೀನಾಮೆ ಕೊಡಿ ಎಂದರೆ, ಇದು ನಾವು ಹಾಕಿಕೊಂಡ ಪದ್ಧತಿಯ ಮೇಲೆ ನಾವು ಇಲ್ಲಿ ಕೆಲಸ ಮಾಡುತ್ತಿದ್ದೇವೆ. ಈ ರೀತಿ ಎಲ್ಲಿ ನಡೆದಿದೆ? First time without giving notice, ಈ ರೀತಿಯಾಗಿ ಕೇಳುತ್ತಿರುವುದು ಸರಿಯಾದುದಲ್ಲ.

ಇವತ್ತೂ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ವಿರೋಧ ಪಕ್ಷದ ಸದಸ್ಯರನ್ನು ಕೇಳುತ್ತಿದ್ದೇನೆ. ಒಂದು ನೋಟಿಸ್ ಕೊಡಿ, ಚರ್ಚೆ ಮಾಡೋಣ. ಒಂದು ದಿನವಲ್ಲ, ಬೇಕಾದರೆ ಎರಡು ದಿನ ಏನೇನಾಗಿದೆ ಯಾವ ರೀತಿಯಾಗಿದೆ ಎಂಬುದರ ಸಂಪೂರ್ಣ ಚರ್ಚೆಯಾಗಲಿ. ಕೇವಲ ಇದೊಂದೇ ಅಲ್ಲ, ಬೇಕಾದಷ್ಟಿದೆ. ನಾವೂ ಬೆಳಕು ಚೆಲ್ಲುವುದಕ್ಕೆ ಅವಕಾಶವಿದೆ. ಅವರಿಗೂ ಬೆಳಕು ಚೆಲ್ಲುವುದಕ್ಕೆ ಅವಕಾಶವಿದೆ. ಅವರಿಗೆ convince ಆದರೆ ತೀರ್ಮಾನ ಮಾಡಲಿ. ನಾನು ಮಾನ್ಯ ಬಿ. ನಾಗೇಂದ್ರ ಅವರನ್ನು ಏಕೆ ಸಂಪುಟಕ್ಕೆ ಸೇರಿಸಿಕೊಂಡಿದ್ದೇನೆ ಎಂಬುದನ್ನು ಹೇಳುತ್ತೇನೆ. ಸಮಾಧಾನ ಆಗಲಿಲ್ಲ ಎಂದರೆ ಬೇಕಾದರೆ ಮುಂದುವರೆಸಲಿ. ಚರ್ಚೆಯೇ ಇಲ್ಲದೆ, ಸುಮ್ಮನೆ "ಭ್ರಷ್ಟರು, ರಾಹುಲ್ ಗಾಂಧಿ ಮನೆಗೆ ದುಡ್ಡು ಹೋಯಿತು, ಡಿ.ಕೆ.ಶಿವಕುಮಾರ್ ಸರ್ಕಾರ ಭ್ರಷ್ಟ ಸರ್ಕಾರ" ಈ ರೀತಿಯಾಗಿ ಏನೇನೋ ಹೇಳಿಕೊಂಡು ಕುಳಿತರೆ ಹೇಗೆ? ದಯವಿಟ್ಟು ಇವತ್ತೂ ಕೂಡ ನೋಟಿಸ್ ಕೊಡಿ, ಎರಡು ದಿನ ಚರ್ಚೆ ಮಾಡಿ, ನಿಮ್ಮ ಎಲ್ಲಾ ವಿಚಾರಗಳನ್ನೂ ದಯವಿಟ್ಟು ತಿಳಿಸಿ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಮುಖ್ಯಮಂತ್ರಿಯವರೆ, on the floor of the House, ರೂ.187 ಕೋಟಿ ಅಲ್ಲ, ರೂ.89 ಕೋಟಿ ಭ್ರಷ್ಟಾಚಾರ ನಡೆದಿದೆಯೆಂದು ಸದನದಲ್ಲಿಯೇ ಮಾನ್ಯ ಸಿದ್ಧರಾಮಯ್ಯನವರು ಒಪ್ಪಿಕೊಂಡಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:-** ಸರಿ. ಮಾನ್ಯ ನಾಗೇಂದ್ರ ಅವರದ್ದು ರೂ.85 ಕೋಟಿ ನಡೆದಿದೆಯೋ, ರೂ.90 ಕೋಟಿ ನಡೆದಿದೆಯೋ ಏನಾಗಿದೆ ಎಂಬುದನ್ನು ಸರಿಯಾದ ರೀತಿಯಲ್ಲಿ ಚರ್ಚೆ ಮಾಡಿ.

**ಶ್ರೀ ಎನ್. ರವಿಕುಮಾರ್:-** ಅಂದು ಮಾನ್ಯ ಮುಖ್ಯಮಂತ್ರಿಯವರೇ ಒಪ್ಪಿಕೊಂಡಿದ್ದರೂ, ಪುನಃ ಏಕೆ ಅವರನ್ನು ಸಂಪುಟಕ್ಕೆ ತೆಗೆದುಕೊಂಡಿರಿ?

**ಶ್ರೀ ಡಿ. ಕೆ. ಶಿವಕುಮಾರ್:-** ಅದನ್ನು ಹೇಳಿ. ನೀವು ನಿಮ್ಮ ಸ್ಥಳದಲ್ಲಿ ಕುಳಿತು ಕೇಳಿ. ಎರಡು ವರ್ಷಗಳ ಕಾಲ we have kept the Minister out of the Government, to enquire about this. We have come to a conclusion.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮುಖ್ಯಮಂತ್ರಿಯವರೆ, ಅವರ ಮೇಲೆ ಚಾರ್ಜ್‌ಶೀಟ್ ಆಗಿದೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ನೋಡಿ... ನಾನು ಯಾರ್ಯಾರು ಸೆಂಟ್ರಲ್ ಮಿನಿಸ್ಟರ್, ಯಾರ್ಯಾರು ಸ್ಟೇಟ್ ಮಿನಿಸ್ಟರ್‌ಗಳ ಮೇಲೆ ಕೇಸ್‌ಗಳಿವೆ, ಹೇಗೆ ನಡೆಯಿತು ಎಂದು ಹೆಸರುಗಳನ್ನು ಹೇಳಿದರೆ ಇವರಿಗೆ ಬೇಜಾರಾಗುತ್ತದೆ. ಅದೆಲ್ಲಾ ನನಗೆ ಹೇಳುವುದಕ್ಕೆ ಇಷ್ಟವಾಗುವುದಿಲ್ಲ. Let us only confine to this. If you want I will tell all the names also.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮುಖ್ಯಮಂತ್ರಿಯವರೆ, ನೀವೇ ಒಪ್ಪಿಕೊಂಡಿರುವ ವಿಷಯಕ್ಕೆ ರಾಜೀನಾಮೆ ಕೊಡಿಸಿ. On the floor of the House ಒಪ್ಪಿಕೊಂಡಿದ್ದೀರಿ. ಹೊರಗಡೆನೂ ಅಲ್ಲ, ಸದನದಲ್ಲಿ ಒಪ್ಪಿಕೊಂಡಿದ್ದೀರಿ.

**Sri D.K.SHIVAKUMAR:-** You discuss about it.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಸಂಸದೀಯ ವ್ಯವಹಾರಗಳಲ್ಲಿ ಯಾವ ರೀತಿಯಿಂದ ನಡೆದುಕೊಳ್ಳಬೇಕು ಎನ್ನುವಂಥ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರ ಚರ್ಚೆಗೆ ತಯಾರಿಲ್ಲ ಎಂದು ಅವರು ಹೇಳಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಈ ಸದನದ ಗೌರವಾನ್ವಿತ ಸದಸ್ಯರು. ಹಗರಣ ಏನು ನಡೆದಿದೆ, ಏನಾಗಿದೆ ಎಂಬುದರ ಬಗ್ಗೆ ಚರ್ಚಿಸಿ. ಮಾನ್ಯ ರವಿಕುಮಾರ್ ಅವರು ಹೇಳಿದಂತೆ ಎಷ್ಟು ಜನರ ಮೇಲೆ ಚಾರ್ಜ್‌ಶೀಟ್ ಹಾಕಿಲ್ಲ? ಚಾರ್ಜ್‌ಶೀಟ್ ಹಾಕಿದ ಮೇಲೆ ನ್ಯಾಯಾಲಯ ಅವರಿಗೇನಾದರೂ ಶಿಕ್ಷೆ ಕೊಟ್ಟಿದ್ದರೆ... ಇನ್ನೂ ನ್ಯಾಯಾಲಯದಲ್ಲಿ ವಿಚಾರಣೆ ಪ್ರಾರಂಭವಾಗಿರುವುದಿಲ್ಲ. ಎಷ್ಟು ಜನ ಬಿಜೆಪಿ ಎಂಪಿಗಳ ಮೇಲೆ, ಎಷ್ಟು ಜನ ಮಂತ್ರಿಗಳ ಮೇಲೆ...

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಜಡ್ಜ್‌ಮೆಂಟ್ ಬಂದ ಮೇಲೆ ಪುನಃ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ:-** ಅದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಮಾತನಾಡುವುದು ಬೇಡವೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾಗಿದೆ. ಮಾತನಾಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾಗಿದೆ. ನಾನೊಂದೆರಡು ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನೋಟಿಸ್ ಕೊಡಿ, ಬಾವಿಗೆ ಬನ್ನಿ ಎಂದು ಕರೆದಿದ್ದಾರೆ.

**ಸಭಾಪತಿಯವರು:-** ಬಾವಿಗೆ ಬನ್ನಿ ಎಂದು ಹೇಳಿಲ್ಲ, ಅವರೇನು ನಿಮ್ಮನ್ನು ಕರೆದಿಲ್ಲ. ಅವರು ಹೇಳಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೋಟಿಸ್ ಕೊಡಿ. ಆಗಿಲ್ಲ ಎಂದರೆ ಆಮೇಲೆ ಮುಂದುವರೆಸಿ ಎಂದು.

(ಗೊಂದಲ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ನಮ್ಮ ಉತ್ತರವನ್ನೂ ಕೇಳಿ. ನಾವೇನೂ ವೈಯಕ್ತಿಕವಾಗಿ ನಾಗೇಂದ್ರ ಅವರ ವಿರೋಧಿಗಳಲ್ಲ. ಈಗಾಗಲೇ ಹಗರಣ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ ರೀತಿಯಲ್ಲಿ ಅವರು ರಾಜೀನಾಮೆ ಕೊಟ್ಟಿದ್ದರು. ಎರಡು ವರ್ಷ ಹೊರಗಿದ್ದದ್ದು ಸರಿ. ಕೋರ್ಟ್‌ನಲ್ಲಿ ಕೇಸ್ ಇದೆ, bail ಮೇಲೆ ಅವರು ಹೊರಗೆ ಇದ್ದಾರೆ, ಅವರು ಇನ್ನು ಕೇಸ್‌ನಿಂದ ಮುಕ್ತರಾಗಿಲ್ಲ. ಕೋರ್ಟ್ ಯಾವುದೇ ಆದೇಶ ಕೊಟ್ಟಿಲ್ಲ. ಕೋರ್ಟ್‌ನಿಂದ ಏನಾದರೂ ಆದೇಶ ಬಂದಿದ್ದರೆ ಒಪ್ಪೋಣ. ಇಲ್ಲಿ ಎಸ್. ಐ. ಟಿ. ಏನೇನು ಮಾಡುತ್ತದೆ ಎನ್ನುವುದು ಗೊತ್ತಿದೆ. ಎಸ್. ಐ. ಟಿ. ಯಾರ ಕೆಳಗೆ ಕೆಲಸ ಮಾಡುತ್ತದೆ ಅದೂ ಗೊತ್ತಿದೆ. ಅದಕ್ಕಾಗಿ ವಿಸ್ತಾರವಾಗಿ ಹೋಗುವುದಿಲ್ಲ. ನಾನು ಹೇಳುವುದು ಸರ್ಕಾರಕ್ಕೆ ಅವರನ್ನು ವಾಪಸ್ ತೆಗೆದುಕೊಳ್ಳಲು ಆತುರವೇಕೆ? ನೀವು ಬೇರೆಯವರನ್ನು ತೆಗೆದುಕೊಳ್ಳಿ, ನಮ್ಮದೇನೂ ಅಭ್ಯಂತರವಿಲ್ಲ.

(ಗೊಂದಲ)

**ಶ್ರೀ ಐವನ್ ಡಿಸೋಜ:-** ಸಿಬಿಐ ಮತ್ತು ಇಡಿ ಅವರ ಕೈಯಲ್ಲಿ ತನಿಖೆ ಮಾಡಿಸಿ. ಅದೂ ನಿಮ್ಮದೇ ಸಂಸ್ಥೆ.

(ಗೊಂದಲ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನೀವು ಬೇರೆಯವರನ್ನು ಮಾಡಿ, ನಮ್ಮದೇನೂ ಅಭ್ಯಂತರವಿಲ್ಲ. ವಾಲ್ಮೀಕಿ ಸಮುದಾಯದವರನ್ನು ಮಂತ್ರಿ ಮಾಡಿ. ನಮಗೇನೂ ತೊಂದರೆಯಿಲ್ಲ. ಆದರೆ ಕಳಂಕಿತ ಮಂತ್ರಿಯನ್ನು ಪುನಃ ನೀವು induct ಮಾಡಿದ್ದಕ್ಕೆ ಕಾರಣ ಕೊಡಬೇಕು.

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಇದನ್ನೇ ಹೇಳುತ್ತಿದ್ದೇನೆ. ನೀವು ಚರ್ಚೆಗೆ ಬನ್ನಿ. ಚರ್ಚೆ ಮಾಡಿ ಎಂದು ಮುಖ್ಯಮಂತ್ರಿಗಳು ಹೇಳಿದರು. ನೋಟಿಸ್ ಕೊಡಿ, ಚರ್ಚೆ ಮಾಡೋಣ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇದರಲ್ಲಿ ಚರ್ಚೆ ಮಾಡುವಂಥದ್ದು ಏನೂ ಉಳಿದಿಲ್ಲ.

**ಶ್ರೀ ಎನ್. ರವಿಕುಮಾರ್:-** ವಜಾ ಮಾಡಿ, ನಂತರ ಚರ್ಚೆಗೆ ಬರುತ್ತೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅವರನ್ನು ವಜಾ ಮಾಡಿ. ನಾವು ಕಲಾಪ ನಡೆಸಲು ಸಹಕರಿಸುತ್ತೇವೆ.

**(ಗೊಂದಲ)**

**ಶ್ರೀ ಎಸ್. ರವಿ:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನೋಟಿಸ್ ಕೊಡುವುದಕ್ಕೆ ಏನು ಸಮಸ್ಯೆ? ಅದೇನು ಹೇಳಬೇಕೆಂದಿದ್ದೀರೋ ಅದನ್ನು ನೋಟಿಸ್ ಕೊಟ್ಟು ಅಧಿಕೃತವಾಗಿ ಹೇಳಿ. ದಾಖಲೆಗೆ ಹೋಗಲಿ. ಮಾಧ್ಯಮದವರು ಇದ್ದಾರೆ. ನಿಮ್ಮ ವಿಚಾರವನ್ನು ಮಾಧ್ಯಮದ ಮುಖೇನ ರಾಜ್ಯದ ಜನತೆಗೆ ಕೊಡಿ. ನೋಟಿಸ್ ಕೊಡುವುದಕ್ಕೆ ಏನು ಸಮಸ್ಯೆ? ನಮ್ಮನ್ನು ರಕ್ಷಣೆ ಮಾಡುತ್ತಿರುವ ಸಂವಿಧಾನ ಬದ್ಧವಾದ ನಿಯಮಾವಳಿಗಳಿಗೆ ಅನುಗುಣವಾಗಿ ಚರ್ಚೆಗೆ ಬನ್ನಿ. ನೋಟಿಸ್ ಕೊಟ್ಟು ಏನು ಬೇಕಾದರೂ ಆರೋಪ ಮಾಡಿ. ದಾಖಲಾತಿಗೆ ಹೋಗಲಿ. ನಿಮ್ಮ ಮಾತುಗಳನ್ನು ಮಾಧ್ಯಮದವರು ವರದಿ ಮಾಡಲಿ. ನೋಟಿಸ್ ಕೊಡದೆ ಮಾತನಾಡುತ್ತಾ ಕುಳಿತುಕೊಂಡರೆ ಏನು ಪ್ರಯೋಜನ? ವಿತಂಡವಾದ ಏಕೆ ಮಾಡುತ್ತೀರಿ? ನೋಟಿಸ್ ಕೊಡಿ. ವಿತಂಡವಾದ ಮಾಡಬೇಡಿ, ನೋಟಿಸ್ ಕೊಡಿ. ನೋಟಿಸ್ ಕೊಟ್ಟು ಮಾತನಾಡಿ ಎಂದು ಮಾನ್ಯ ಮುಖ್ಯಮಂತ್ರಿಯವರೇ ಹೇಳುತ್ತಿದ್ದಾರೆ.

(ಮುಂದು)

(821) ದಿ: 21-08-2026, (2.10), ಕೆಜಿ-ಎಕೆ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಎರಡೂ ಕಡೆಯ ಮಾನ್ಯ ಸದಸ್ಯರು ಪರಸ್ಪರ ಮಾತನಾಡತೊಡಗಿದ್ದರು)**

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೈಜೋಡಿಸಿ ಒಂದು ಪ್ರಾರ್ಥನೆಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಯಾವ ವಿಚಾರದಲ್ಲಿ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಕಾಶಪ್ಪನವರು ದಲಿತರನ್ನು ನಿಂದಿಸಿದ್ದಾರೆ. ಅವರು ಮಾನ್ಯ ನರೇಂದ್ರ ಮೋದಿಯವರು ದೇಶವನ್ನು ಹೊಲಗೇರಿ ಮಾಡಿದ್ದಾರೆ ಎನ್ನುವುದನ್ನು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎ.ಐ.ಸಿ.ಸಿ. ಅಧ್ಯಕ್ಷರು ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ದೇಶದಲ್ಲಿ ಮಾಡಿರುವಂತಹ ಅವಮಾನಕ್ಕಿಂತ

ಉದಾಹರಣೆ ಬೇಕೇ? ಅವರಿಗೆ ಅಸ್ಪೃಶ್ಯತೆಯ ಬಗ್ಗೆ, ದಲಿತರ ನಿಂದನೆ ಮಾಡಿರುವ ಬಗ್ಗೆ ಮಾತನಾಡುವುದಕ್ಕೆ ಅವರಿಗೆ rights ಏನಿದೆ?

(ಗೊಂದಲ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಕಾಶಪ್ಪನವರನ್ನು arrest ಮಾಡಬೇಕು.

(ಗೊಂದಲ)

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಅವರು ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ನಡೆಸಿಕೊಂಡಿರುವಂತಹ ರೀತಿಯ ಬಗ್ಗೆ ಹೇಳಲಿ? ಇವರಿಗೆ ಯಾವ ನೈತಿಕತೆ ಇದೆ?

(ಗೊಂದಲ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಕಾಶಪ್ಪನವರ ವಿರುದ್ಧ Atrocity Act [The Scheduled Castes and the Scheduled Tribes (Prevention of Atrocities) Act] ಅಡಿ atrocity case ಹಾಕಬೇಕು. ಎಲ್ಲರಿಗೂ ಒಂದು ನ್ಯಾಯವಾದರೆ, ಇವರಿಗೊಂದು ನ್ಯಾಯವೇ? ಇದು ಸಾಧ್ಯವಿಲ್ಲ.

**ಸಭಾಪತಿಯವರು:-** ಎರಡೂ ಕಡೆಯವರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಎರಡೂ ಕಡೆಯ ಸದಸ್ಯರು ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಬಾರದು ಎಂದು ಸೂಚಿಸಿದ್ದರ ಮೇರೆಗೆ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, I am on a point of order. I want certain clarifications from the Chair.

**ಸಭಾಪತಿಯವರು:-** ಮಾನ್ಯ ಸಚಿವರೇ, point of order ಏನು ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, I am on a point of order and I want certain clarifications from the Chair. ruling ಅನ್ನು ಹೇಳುತ್ತೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳನ್ನು ಈ ಸದನ ಮಾಡಿರುತ್ತದೆ. ಈ ನಿಯಮಾಳಿಯ ಅಧ್ಯಾಯ-IX ರಲ್ಲಿ "ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲ ಚರ್ಚೆ ನಡೆಸುವುದು".

ಇದರಲ್ಲಿ ನಿಯಮ *68:- "ಚರ್ಚೆ ನಡೆಸಲು ಸೂಚನೆ ಕೊಡುವುದು":- 'ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಯಾರೇ ಒಬ್ಬ ಸದಸ್ಯರು, ಚರ್ಚೆಗೆ ತರಬೇಕೆಂದಿರುವ ವಿಷಯವನ್ನು ಸ್ಪಷ್ಟವಾಗಿ ಮತ್ತು ನಿರ್ದಿಷ್ಟವಾಗಿ ನಮೂದಿಸಿರುವ ಲಿಖಿತ ಸೂಚನೆಯನ್ನು ಕಾರ್ಯದರ್ಶಿಯವರಿಗೆ ಕೊಡಬಹುದು':*
*ಅಲ್ಲದೇ, 'ಆ ಸೂಚನೆಯೊಂದಿಗೆ ಆ ವಿಷಯ ಸಂಬಂಧದಲ್ಲಿ ಚರ್ಚೆ ನಡೆಸಲು ಇರುವ ಕಾರಣಗಳನ್ನು ನಮೂದಿಸಿರುವ ವಿವರಣಾತ್ಮಕ ಟಿಪ್ಪಣಿಯನ್ನು ಸಹ ಕಳುಹಿಸಬೇಕು. ಅಷ್ಟೇ ಅಲ್ಲದೆ, ಆ ಸೂಚನೆಯು ಕನಿಷ್ಟ ಇಬ್ಬರು ಸದಸ್ಯರುಗಳ ಸಹಿಯನ್ನು ಹೊಂದಿರಬೇಕು ಎಂಬುದಾಗಿ ಇದೆ'. ನಂತರ ..,*
*ನಿಯಮ 69:- "ಸೂಚನೆಯನ್ನು ಅಂಗೀಕರಿಸುವ ಮತ್ತು ಕಾಲವನ್ನು ನಿರ್ಣಯಿಸುವ ವಿಚಾರವನ್ನು ಸಭಾಪತಿಯವರು ತೀರ್ಮಾನಿಸುವುದು ಎಂದು ಇದೆ".*

ಮಾನ್ಯ ಸಭಾಪತಿಯವರೇ, ಈ ರೀತಿ ಇರುವಾಗ ನಮ್ಮ ಮುಖ್ಯಮಂತ್ರಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ಸದನದ ನಿಯಮಾವಳಿಯಂತೆ, ಈ ಮಹತ್ವವಾದಂತಹ ವಿಷಯದ ಬಗ್ಗೆ ನೋಟಿಸ್ ಕೊಡಿ. ಅದರ ಚರ್ಚೆಗೆ ಸರ್ಕಾರ ತಯಾರಿದೆ ಎಂದು ಸೌಜನ್ಯದಿಂದ ಹೇಳಿದ್ದರೂ ಸಹ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅವರ ಮಾನ್ಯ ಸದಸ್ಯರುಗಳು ಈ ಸದನವನ್ನು ಈ ರೀತಿ ನಡೆಸಿಕೊಳ್ಳುತ್ತಿರುವುದು ಸರಿಯಾದುದಲ್ಲ. ಅದಕ್ಕೆ Rule 68 and Rule 69 of the Rules of Procedure and Conduct of Business in the Karnataka Legislative Council ಪ್ರಕಾರ, ತಾವು ದಯವಿಟ್ಟು ruling ಅನ್ನು ಕೊಡಲೇಬೇಕು. ಅಲ್ಲದೇ, ವಿರೋಧ ಪಕ್ಷದವರು ಈ ರೀತಿ ವರ್ತನೆ ಮಾಡುತ್ತಿರುವುದನ್ನು ನಿಲ್ಲಿಸಲ್ಲಿಕ್ಕೆ ಅವರಿಗೆ ಸೂಚನೆಯನ್ನು ಕೊಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ತಾವು ಹೇಳಿದಂತೆ, Rule 68 and Rule 69 ಪ್ರಕಾರ, ನಾವು ಈಗಾಗಲೇ ಅವರಿಗೆ ಸೂಚನೆ ಕೊಟ್ಟು ನೋಟಿಸ್ ಕೊಡಿ ಎಂದು ಹೇಳಿದ್ದೇವೆ. ನಾವು ಕಳೆದ 4 ದಿವಸಗಳಿಂದ ನೋಟಿಸ್ ಕೊಡಿ ಎಂದು ಹೇಳುತ್ತಿದ್ದೇನೆ. ಅವರು ನೋಟಿಸ್ ಕೊಡದೇ ಮೊಂಡು ವಾದನವನ್ನು ಮಂಡಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ದಲಿತರಿಗೆ ಇಂತಹ ಅಪಮಾನ ಮಾಡಿದ್ದಾರೆ..

**(ಗೊಂದಲ)**

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಹಕ್ಕುಗಳಿಗೆ ಚ್ಯುತಿಯಾಗುತ್ತಿದ್ದು, House ನಡೆಯುತ್ತಿಲ್ಲವೆಂದು ನೋಟಿಸ್ ಕೊಟ್ಟಿದ್ದೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು. ಸೋಮವಾರ ತೆಗೆದುಕೊಳ್ಳೋಣ. ತಾವು ನೋಟಿಸ್ ಕೊಡಿ. ಈಗ ಸದನವನ್ನು ಸೋಮವಾರ ಬೆಳಗ್ಗೆ 11:00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಮಧ್ಯಾಹ್ನ 2 ಗಂಟೆ 15 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 24ನೇ ಆಗಸ್ಟ್ ಮಾಹೆ 2026ರ ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**